॥ ಶ್ರೀಃ ॥

ಶ್ರೀಮತೇ ರಾಮಾನುಜಾಯ ನಮಃ



## ಶ್ರೀವರಾಹ ಪುರಾಣಾಂತರ್ಗತ

# ಕೈಶಿಕ ಪುರಾಣಮ್

(ಶ್ರೀ ಪರಾಶರ ಭಟ್ಟರ ವ್ಯಾಖ್ಯಾನದ ಕನ್ನಡಾನುವಾದ)

ಅನುವಾದಕರು

**ಶ್ರೀಮತಿ. ರಮಾ ಶ್ರೀನಿವಾಸನ್.**

ಬಿ.ಎಸ್ಸಿ. ಎಂ.ಎ (ಕನ್ನಡ) ಎಂ. ಎ (ಸಂಸ್ಕೃತ)

ಪ್ರಕಾಶಕರು

**ಶ್ರೀವೈಷ್ಣವ ಶ್ರೀ**

ನಂ. 7, 6-ಎ ಮೈನ್ ರೋಡ್, ಮಾರುತಿ ಎಕ್ಸ್‌ಟೆನ್ಷನ್,

ಬೆಂಗಳೂರು - 560 021. ದೂರವಾಣಿ : 3320572.

ಶ್ರೀಃ

ಶ್ರೀಮತೇ ರಾಮಾನುಜಾಯ ನಮಃ



ಶ್ರೀವರಾಹ ಪುರಾಣಾಂತರ್ಗತ

# ಕೈಶಿಕ ಪುರಾಣಮ್

(ಶ್ರೀ ಪರಾಶರ ಭಟ್ಟರ ವ್ಯಾಖ್ಯಾನದ ಕನ್ನಡಾನುವಾದ)

ಅನುವಾದಕರು

**ಶ್ರೀಮತಿ. ರಮಾ ಶ್ರೀನಿವಾಸನ್.**

ಬಿ.ಎಸ್ಸಿ. ಎಂ.ಎ (ಕನ್ನಡ) ಎಂ. ಎ (ಸಂಸ್ಕೃತ)

ಪ್ರಕಾಶಕರು

**ಶ್ರೀವೈಷ್ಣವ ಶ್ರೀ**

ನಂ. 7. 6-ಎ ಮೈನ್ ರೋಡ್, ಮಾರುತಿ ಎಕ್ಸ್ ಟೆನ್ಷನ್,

ಬೆಂಗಳೂರು - 560 021, ದೂರವಾಣಿ : 3320572.

**Kaishika Puranam:** A text translation in Kannada of the commentary by Swami Parashara Bhattar by Smt. Rama Srinivasan

Published by : **"Srivaishnava Shri"**
No.7, 6th 'A' Main
Maruthi Extension
Bangalore - 560 021

Pages : viii + 28

First Edition : 2003 October

Price : 25 - 00

© : Reserved

D.T.P : **Padmamba Enterprises**
Bangalore - 10.

Printed by : **Padmamba Enterprises**
# 38/11, 2nd Main Road,
Shivanagar, Rajajinagar,
Bangalore - 10.
Phone: 3359503, 3303360



ಶ್ರೀ ಲಕ್ಷ್ಮೀ ವರಾಹ ಸ್ವಾಮಿ, ಮೇಲುಕೋಟೆ

ಶ್ರೀಃ

ಶ್ರೀಮತೇ ರಾಮಾನಾಜಾಯ ನಮಃ

# ಬಿನ್ನಹ

ಶ್ರಿಯಃ ಪತಿಯಾದ ಸರ್ವೇಶ್ವರನ ಗುಣಚೇಷ್ಟಿತಗಳು ಅದ್ಭುತ ಹಾಗೂ ಅಪಾರವಾದದ್ದು. ಪರಮಾತ್ಮನ ಚೇಷ್ಟಿತಗಳೆಲ್ಲವೂ ಚೇತನರ ಉದ್ಧಾರಕ್ಕಾಗಿಯೇ ಮೀಸಲಾದವುಗಳು. ಅದಕ್ಕಾಗಿಯೇ ಭಗವಂತನು ಹಲವು ಅವತಾರಗಳನ್ನು ಮಾಡಿ ಲೋಕವೆಲ್ಲವನ್ನೂ ರಕ್ಷಿಸುತ್ತಾನೆ. ಪರಮಾತ್ಮನ ಅವತಾರಗಳು ಅಸಂಖ್ಯಾತವಾದರೂ ಅವುಗಳಲ್ಲಿ ಪ್ರಸಿದ್ಧವಾದವುಗಳು ದಶಾವತಾರಗಳು. ಅವುಗಳಲ್ಲಿಯೂ 'ಶ್ರೀವರಾಹಾತಾರವು' ಅತ್ಯಂತ ವಿಶೇಷವಾದದ್ದು. ಶ್ರೀ ಪರಾಶಭಟ್ಟರ್ ರವರು ತಮ್ಮ ಕೈಶಿಕಪುರಾಣ ವ್ಯಾಖ್ಯಾನದಲ್ಲಿ ವರಾಹಾವತಾರ ವೈಭವವನ್ನು ರಸಭರಿತವಾಗಿ ನಿರೂಪಿಸಿದ್ದಾರೆ. 'ಕೈಶಿಕಪುರಾಣವು' ವರಾಹಪುರಾಣದ ಒಂದು ಭಾಗವಾಗಿದೆ. ಕೈಶಿಕ ದ್ವಾದಶಿಯಂದು ಎಲ್ಲ ದೇವಾಲಯಗಳಲ್ಲೂ ಇದು ಪಾರಾಯಣ ಮಾಡಲ್ಪಡುತ್ತದೆ. ಕೈಶಿಕ ದ್ವಾದಶಿಯಂದು ಪಾರಾಯಣ, ಶ್ರವಣಾದಿಗಳನ್ನು ಮಾಡಿ ಉಜ್ಜೀವನಹೊಂದಬೇಕಾದ ಪ್ರಮುಖವಾದ ಪುರಾಣ ಇದಾಗಿದೆ. ಇದು ಸಕಲ ಚೇತನರನ್ನೂ ಮೋಕ್ಷಸಾಮ್ರಾಜ್ಯಕ್ಕೆ ಒಯ್ಯುವಂತಹುದಾಗಿದೆ. ಇಂತಹ ಗ್ರಂಥ ಕರ್ನಾಟಕದ ಸಕಲ ಕನ್ನಡಿಗರಿಗೂ ಪಾರಾಯಣಕ್ಕಾಗಿ ಲಭ್ಯವಾಗಬೇಕೆಂಬ ಶುಭಸಂಕಲ್ಪದಿಂದ ರಚಿಸಲ್ಪಟ್ಟದ್ದೇ ಈ ಕನ್ನಡಾನುವಾದ.

ಈ ಗ್ರಂಥ ರಚನೆ ಸಾರ್ಥಕವಾಗುವಂತೆ ಸುಂದರವಾಗಿ ಪ್ರಕಟಗೊಂಡು ಎಲ್ಲರ ಕೈಸೇರುವುದಿಕ್ಕೆ ಕಾರಣ ಭೂತರಾದವರು. ಶ್ರೀ ಉ. ವೇ. ಸೇತೂರಾಮನ್. ಎಕ್ಸ್‌ಕ್ಯೂಟಿವ್ ಇಂಜಿನಿಯರ್. ವಿದ್ಯುತ್ ಕಂಪನಿ ಬೆಂಗಳೂರು ಹಾಗೂ ಅವರ ಶ್ರೀಮತಿಯವರಾದ ಗೀತಾಸೇತೂರಾಮನ್ ರವರು. ತಮ್ಮ ತಂದೆತಾಯಿಗಳಾದ ಕೀರಳಾಪುರದ ಮುಡುಂಬೈ ಶ್ರೀ ಉ.ವೇ. ರಾಮಸ್ವಾಮಿ ಅಯ್ಯಂಗಾರ್ ಹಾಗೂ ಶ್ರೀಮತಿ ಸೌಮ್ಯನಾಯಕಮ್ಮ ಅವರ ಸ್ಮರಣಾರ್ಥ ಶ್ರೀ ಸೇತೂರಾಮನವರು ಈ ಗ್ರಂಥವನ್ನು ಪ್ರಕಟಿಸುತ್ತಿದ್ದಾರೆ. ಅವರಿಗೂ ಅವರ ಕುಟುಂಬದವರಿಗೂ ಆ ಪರಮಾತ್ಮನು ಸಕಲಮಂಗಳವನ್ನೂ ಉಂಟುಮಾಡಲೆಂದು ಪ್ರಾರ್ಥಿಸುತ್ತೇನೆ.

27-5-2003 | ಅಡಿಯೇನ್

ವೈಶಾಖಬಹುಳದ್ವಾದಶೀ | ರಮಾಶ್ರೀನಿವಾಸನ್

ಆರ್ಥಿಕ ನೆರವು

# ಶ್ರೀ ಉ.ವೇ. ಸೇತೂರಾಮನ್

ಪ್ರಶಾಂತ ನಗರ, ಬೆಂಗಳೂರು.

ಶ್ರೀಃ

ಶ್ರೀಮತೇ ರಾಮಾನುಜಾಯ ನಮಃ

# ಶ್ರೀ ವರಾಹಪುರಾಣಾಂತರ್ಗತ ಕೈಶಿಕ ಪುರಾಣಮ್

## (ಶ್ರೀ ಪರಾಶರ ಭಟ್ಟರ್ ಅನುಗ್ರಹಿಸಿದ ವ್ಯಾಖ್ಯಾನದ)

## ಕನ್ನಡಾನುವಾದ

### ಮಂಗಳ ಶ್ಲೋಕಗಳು

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ ।
ಪ್ರಸನ್ನ ವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ ॥
ಯಸ್ಯದ್ವಿರದವಕ್ತ್ರಾದ್ಯಾಃ ಪಾರಿಷದ್ಯಾಃ ಪರಶ್ಶತಂ ।
ವಿಘ್ನಂ ನಿಘ್ನಂತಿ ಸತತಂ ವಿಷ್ವಕ್ಸೇನಂ ತಮಾಶ್ರಯೇ ॥
ಏತತ್ ತ್ರೈಲೋಕ್ಯ ನಿರ್ಮಾಣತ್ರಾಣಸಂಹಾರ ಕಾರಣಮ್ ।
ಶ್ರೀಮತ್ ಶ್ರೀರಂಗನಾಥಸ್ಯ ಶಾಸನಂ ಶಾಶ್ವತಂ ಪರಮ್ ।
ಶ್ರೀಮತ್ ಶ್ರೀರಂಗನಾಯಕ್ಯಾಃ ಶಾಸನಂ ಶಾಶ್ವತಂ ಪರಮ್ ॥
ಪರಾವರೇಶ್ವರ ಶಿರಶ್ಚೂಡಾಸಂಚಾರೀ ಶಾಸನಮ್ ।

### ಪುರಾಣ ಮಂಗಳ ಶ್ಲೋಕಗಳು

ನಮೋಸ್ತು ವರಾಹಾಯ ಲೀಲಯೋದ್ಧೃತಮಹೀಂ ।
ಖುರಮಧ್ಯ ಗತೋಯಸ್ಯ ಮೇರುಃ ಕಣಾಕಣಾಯತೇ ॥
ಪ್ರಳಯೋದನ್ವದುತ್ತೀರ್ಣಾಂ ಪ್ರಪದ್ಯೇಹಂ ವಸುಂಧರಾಮ್ ।
ಮಹಾವರಾಹ ದಂಷ್ಟ್ರಾಗ್ರ ಮಲ್ಲೀಕೋಶ ಮಧುವ್ರತಾಮ್ ॥

### ವ್ಯಾಖ್ಯಾನ ಅವತಾರಿಕೆ

'ವೇದೋಽಖಿಲೋ ಧರ್ಮ ಮೂಲಮ್' ಎಂದೂ 'ಪಿತೃದೇವ ಮನುಷ್ಯಾಣಾಂ, ವೇದಚಕ್ಷುಃ ಸನಾತನಮ್' ಎಂದೂ ಹೇಳಲ್ಪಡುವಂತೆ ಅತೀಂದ್ರಿಯಗಳಾದ ತತ್ತ್ವ ಹಿತ, ಪುರಾರ್ಷಾರ್ಥಗಳನ್ನು ತಿಳಿಸುವುವು ಪ್ರಮಾಣಭೂತಗಳಾದ ವೇದಗಳು. ಇವುಗಳಿಗೆ ಪರಿಕರಗಳಾದ ವಿದ್ಯಾಸ್ಥಾನಗಳು ಹತ್ತು.

ಶಿಕ್ಷಾ -- ವರ್ಣಗಳ ಉಚ್ಚಾರಣಾ ವಿಶೇಷ ಪ್ರತಿಪಾದನೆಯನ್ನು ಗುರಿಯಾಗಿ ಉಳ್ಳಶಾಸ್ತ್ರ.

ನಿರುಕ್ತಂ-ವೇದದಲ್ಲಿನ ವರ್ಣಸಾಮಾನ್ಯದಿಗಳನ್ನು ಆಧರಿಸಿ ಪದಗಳ ಅರ್ಥಗಳನ್ನು ಪ್ರತಿಪಾದಿಸುವ ನಿಘಂಟು.

ಛಂಧಃ ವರ್ಣಗಳ ಸಂಖ್ಯಾವಿಶೇಷಗಳನ್ನೊಳಗೊಂಡ 'ಗಾಯತ್ರೀ' ಮುಂತಾದ ಛಂದಸ್ಸುಗಳನ್ನು ತಿಳಿಸುವ ಶಾಸ್ತ್ರ.

ವ್ಯಾಕರಣಂ-ವರ್ಣ ಸಮುದಾಯಾತ್ಮಕವಾದ ಪದಗಳ ತಪ್ಪು, ಸರಿಗಳನ್ನು ನಿರೂಪಿಸುವ ಶಾಸ್ತ್ರ.

ಕಲ್ಪ ಸೂತ್ರಗಳು - ಪದಸಂಗ್ರಹರೂಪವಾದ ವಾಕ್ಯವಿಶೇಷಗಳಿಂದ ಹೇಳಲ್ಪಡುವ ಕರ್ಮಾನುಷ್ಠಾನ ವಿಶೇಷಗಳನ್ನು ಪ್ರಕಾಶಪಡಿಸುವುದು.

ಜ್ಯೋತಿಷಂ--ಶಾಸ್ತ್ರಾನುಗುಣವಾಗಿ ಅನುಷ್ಠಿಸಬೇಕಾದ ಕರ್ಮಗಳನ್ನು ಆಯಾಯಾಕಾಲಕ್ಕೆ ಸರಿಯಾಗಿ ಅನುಷ್ಠಿಸುವಂತೆ ಕಾಲ ವಿಶೇಷಗಳನ್ನು ತಿಳಿಸುವಶಾಸ್ತ್ರ.

ನ್ಯಾಯ ಶಾಸ್ತ್ರ-- ಪ್ರಮಾಣಾದಿ ಷೋಡಶ ಪದಾರ್ಥ ವ್ಯವಹಾರಗಳನ್ನು ಪ್ರತಿಪಾದಿಸುವ ಶಾಸ್ತ್ರ

ಮೀಮಾಂಸಾ ಶಾಸ್ತ್ರ--ಸೋಪಬೃಂಹಣಗಳಾದ ವೇದ ವಚನಗಳಿಂದ ಹೇಳಲ್ಪಡುವ ವಿಶೇಷಗಳನ್ನು ನಿರ್ಧಾರಿತವಾಗಿ ತಿಳಿಸುವ ಯುಕ್ತಿ ವಿಶೇಷಗಳನ್ನು ಪ್ರತಿಪಾದಿಸುವುದು.

ವೇದೋಪಬೃಂಹಣಗಳಲ್ಲಿ ಧರ್ಮಶಾಸ್ತ್ರಗಳು ಕರ್ಮಕಾಂಡದ ಉಪಬೃಂಹಣಗಳಾಗಿವೆ.

ಇತಿಹಾಸ ಮತ್ತು ಪುರಾಣಗಳು ಜ್ಞಾನಕಾಂಡವಾದ ಉಪನಿಷತ್ತುಗಳ ಉಪಬೃಂಹಣಗಳಾಗಿವೆ

ಅದರಲ್ಲಿ ಇತಿಹಾಸಗಳು ಧರ್ಮಕಾಮಾದಿ ಪುರುಷಾರ್ಥವಿಶೇಷ ಸ್ವರೂಪಗಳನ್ನು ಗಮನದಲ್ಲಿರಿಸಿಕೊಂಡು ಪ್ರವೃತ್ತವಾದದ್ದರಿಂದ ತತ್ವಪ್ರತಿಪಾದನದಲ್ಲಿ ವಿಳಂಬಿತವಾಗಿ ತತ್ವ, ಹಿತ, ಪುರುಷಾರ್ಥಗಳ ನಿರೂಪಣೆಯಲ್ಲಿ ಅಪ್ರಯೋಜಕವಾಗಿದೆ.

ಪುರಾಣಗಳು ಪರತತ್ವ, ಪರಮಹಿತ, ಪರಮಪುರುಷಾರ್ಥಗಳಲ್ಲಿ ಸಾಕ್ಷಾತ್ ಉಪಬೃಂಹಣಗಳಾಗಿವೆ.

'ಸಂಕೀರ್ಣಾಸ್ಸಾತ್ತ್ವಿಕಾಶ್ಚೈವ ರಾಜಸಾಸ್ತಾಮಸಾಸ್ತಥಾ। ಎಂಬುದಾಗಿ ಒಂದೊಂದು ಕಲ್ಪಕ್ಕೂ ಅನುಗುಣವಾಗಿ ಸಾತ್ವಿಕ, ರಾಜಸ ಮತ್ತು ತಾಮಸವೆಂದು ವಿಭಜಿಸಲಾಗಿದೆ.

ಯಸ್ಮಿನ್ ಕಲ್ಪೇತು ಯತ್ಪ್ರೋಕ್ತಂ ಪುರಾಣಂ ಬ್ರಹ್ಮಣಾ ಪುರಾ।
ತಸ್ಯತಸ್ಯತು ಮಾಹಾತ್ಮ್ಯಂ ತತ್‌ರೂಪೇಣ ವರ್ಣ್ಯತೇ।
ಅಗ್ನೇಃ ಶಿವಸ್ಯ ಮಾಹಾತ್ಮ್ಯಂ ತಾಮಸೇಷು ಪ್ರಕೀರ್ತ್ಯತೇ।
ರಾಜಸೇಷು ಮಾಹಾತ್ಮ್ಯಮಧಿಕಂ ಬ್ರಹ್ಮಣೋವಿದುಃ।
ಸಂಕೀರ್ಣೇಷು ಸರಸ್ವತ್ಯಾಃ ಪಿತೃಣಾಂಚ ನಿಗದ್ಯತೇ। (ನಿಗತ್ಯತೇ)
ಸಾತ್ವಿಕೇಷ್ವಥ ಕಲ್ಪೇಷು ಮಾಹಾತ್ಮ್ಯಮಧಿಕಂ ಹರೇಃ।
ತೇಷ್ವೇ ಯೋಗಸಂಸಿದ್ಧಾ ಗಮಿಷ್ಯಂತಿ ಪರಾಂಗತಿಮ್ ॥

ಎಂದು ಪುರಾಣವಚನ,

ಸಾತ್ವಿಕ ಕಲ್ಪಗಳಲ್ಲಿ ಸತ್ವಗುಣಾಧಿಕ್ಯವುಳ್ಳ ಚತುರ್ಮುಖಬ್ರಹ್ಮನಿಂದ ಹೇಳಲ್ಪಟ್ಟವುಗಳಾಗಿ ''ಮಹಾನ್ ಪ್ರಭುರ್ವೈ ಪುರುಷಸ್ಸತ್ವಸ್ಯೈಷ ಪ್ರವರ್ತಕಃ'' ಎಂಬಂತೆ ಸತ್ವ ಪ್ರವರ್ತಕವಾದ, ಪರಮಪುರುಷನಾದ ಹರಿಯನ್ನು ಪ್ರತಿಪಾದಿಸುವಂತಹುದು ಸಾತ್ವಿಕಪುರಾಣಗಳು.

'ಸತ್ವಾತ್ ಸಂಜಾಯತೇ ಜ್ಞಾನಮ್' ಎಂದೂ 'ಸತ್ವಂ ವಿಷ್ಣು ಪ್ರಕಾಶಕಮ್' ಎಂಬಂತೆಯೂ ಅಜ್ಞಾನ, ಸಂಶಯ, ವಿಪರ್ಯಯಗಳು ಇಲ್ಲವಾಗುವಂತೆ ಪರತ್ವಾದಿ ವಿಶೇಷಗಳ ನಿರ್ಣಯದಲ್ಲಿ ಸಾತ್ವಿಕ ಪುರಾಗಳೇ ಮುಮುಕ್ಷುಗಳಿಗೆ ಉಪಜೀವ್ಯಗಳಾಗಿವೆ.'

ಸಾತ್ವಿಕಪುರಾಣಗಳಲ್ಲೂ, ಇತರರಿಂದ ಹೇಳಲ್ಪಡುವ ಪುರಾಣಗಳಿಗಿಂತ ಪರಮ ಸತ್ವ ಸಮಾಶ್ರಯಣೀಯನಾದ ಭಗಂತನೇ ಹೇಳುವ ಪುರಾಣವೇ ಉತ್ಕೃಷ್ಟವಾಗಿವೆ, ಪರಮಾತ್ಮನ ವಾಕ್ಯಗಳಲ್ಲೂ ವರಾಹಮೂರ್ತಿಯ ವಾಕ್ಯವೇ ಪರಮ ಪ್ರಮಾಣವೆಂಬುದನ್ನು ವ್ಯಾಖ್ಯಾನಕಾರರು ರಸಭರಿತವಾಗಿ ನಿರೂಪಿಸುತ್ತಾರೆ

''ಕಳ್ಳವೇದತ್ತೈ ಕ್ಕೊಂಡುಪೋಯ್ ಪುರಂ ಪುಕ್ಕವಾರುಂ। ಕಲಂದ ಶುರರ್ಕ್ಕೈ ಉಳ್ಳಂ ಭೇದಮ್ ಶೆಯ್ದಿಟ್ಟು ಉಯಿರುಂಡ ಉಪಾಯಂಗಳುಂ'', ಎಂದು ಬುದ್ಧನಾಗಿ ಹೇಳಿದ ಮಾತುಗಳೂ' ತಿಣ್ ಕಳಲ್ ಕಾಲ್ ಅಶುರರ್ಕ್ಕು ತೀಂಗಿಳೈಕ್ಕುಂ ತಿರುಮಾಲ್' ಎಂಬಂತೆ ಅಸುರಪ್ರಕೃತಿಗಳನ್ನು ಮರುಳುಗೊಳಿಸುವುದಕ್ಕಾಗಿ

ಸರ್ವೇಶ್ವರನು ನುಡಿವ ಮಾತುಗಳೂ ಸಾತ್ವಿಕಗಳಾಗುವುದಿಲ್ಲ. ಅಲ್ಲದೆ ಪರಮಾತ್ಮನು ತನ್ನ ಅವಸ್ಥಾ ವಿಶೇಷಗಳಲ್ಲಿ ಹೇಳುವ ಮಾತುಗಳೂ ಉಪಾದೇಯವಲ್ಲ.

ಪರಮಪದನಾಥನು ಅನುಗ್ರಹಿಸುವ ವಾಕ್ಯ ಕೇವಲ ಬಂಧಮುಕ್ತರಿಗೆ ಮಾತ್ರ ಮೀಸಲಾಗಿದೆ. ಕ್ಷೀರಾಬ್ಧಿನಾಥನ ವಾಕ್ಯಗಳು ಕಡಲತರೆಗಳಲ್ಲಿ ಮಿಳಿತವಾಗಿ ಅರ್ಥವೇ ಆಗುವಂತಿಲ್ಲ.

ಮತ್ಸ್ಯರೂಪಿಯಾದವನು - ತಾನೇ ಒಮ್ಮೆಯೂ ನೀರನ್ನು ದಾಟಿ ದಡಸೇರಲಾರದವನಾದ್ದರಿಂದ ನಮ್ಮನ್ನು ದಡಕಾಣಿಸುವುದಾದರೂ ಹೇಗೆ ಎನ್ನುವಂತಿದೆ.

ಕೂರ್ಮರೂಪಿಯಾದವನು -ಗಂಭೀರವಾಗಿರುವವರೂ ಕಲಕಿ ಹೋಗುವಂತೆಯೂ (ಗಂಭೀರವಾದ ಕ್ಷೀರಸಾಗರ ಅಲ್ಲೋಲ ಕಲ್ಲೋಲ ವಾಯಿತು) ಸ್ಥಿರವಾದವರು ಭ್ರಮಿಸುವಂತೆಯೂ, (ಮಂದರ ಪರ್ವತ ಸುತ್ತಿ ಸುತ್ತಿ ತಿರುಗಿತು) ನೈಚ್ಯವನ್ನು ಬಿಡದವನ ಮಾತಾದ್ದರಿಂದಲೂ ಹೇಗೆ ಪ್ರಮಾಣವಾದೀತು ?

ಶ್ರೀ ನರಸಿಂಹನದು ಕುತ್ತಿಗೆಗೆ ಮೇಲೆ ಒಂದು ಮಾತು ಕೆಳಗೆ ಒಂದ ಮಾತಾದ್ದರಿಂದ ಭರವಸೆಗೆ ಅರ್ಹವಲ್ಲದ್ದಾಗಿದೆ.

ಶ್ರೀ ವಾಮನನ ಮೋಡಿವಾಕ್ಯಗಳು ವಿಷಮಪದಗಳಾಗಿವೆ. (ತೋರಿದ್ದು ಒಂದು ಪಾದ ಅಳೆದದ್ದು ಇನ್ನೊಂದು) ಇಷ್ಟೆ ಅಲ್ಲದೆ ಕವಿಯಾದವನ (ಸರ್ವಜ್ಞರಾದ ಶುಕ್ರಾಚಾರ್ಯರ)ಕಣ್ಣನ್ನು ಕಿತ್ತುಕೊಂಡವನಾಗಿದ್ದಾನೆ.

ಪರಶುರಾಮನದಾದರೋ ಸರ್ವಕಾಲದಲ್ಲೂ ಕೊಡಲಿಯನ್ನು ಧರಿಸಿ ಕ್ಷಮಾಹೀನನಾದವನ ಮಾತಾದ್ದರಿಂದ ಸಮೀಪಿಸುವುದಕ್ಕೇ ಅಂಜುವಂತಿದೆ.

ಚಕ್ರವರ್ತಿಕುಮಾರನಾದ ಶ್ರೀರಾಮನು ಕಪಿಗಳೊಡನೆ ಕೂಡಿದವನಾಗಿ ಭಾಗವತರಿಗೇ ಬಾಧಕವಾಗುವಂತಿದೆ. (ವಿಭೀಷಣನನ್ನು ಕಪಿಕುಲವೆಲ್ಲ ನಿರಾಕರಿಸಿತು)

ಬಲರಾಮನ ಮಾತು ಮದಿರಾಪಾನದಿಂದ ಮತ್ತನಾದವನ ಮಾತು. ಅಷ್ಟೆ ಅಲ್ಲದೆ ಉತ್ತಮ ವರ್ಣದವನಾಗಿದ್ದರೂ ನೇಗಿಲನ್ನು ಹಿಡಿದವನ ಮಾತಾದ್ದರಿಂದ ನಂಬಲನರ್ಹವಾಗಿದೆ.

ಶ್ರೀ ಕೃಷ್ಣನಾದರೋ ಹುಟ್ಟಿನಿಂದಲೇ ಕಳ್ಳತನದಲ್ಲೇ ಮುಳು ಗಿದವನಾದ್ದರಿಂದ ಒಂದು ಕಾಲಕ್ಕೂ ನಂಬಲನರ್ಹನಾಗಿದ್ದಾನೆ.

ಕಲ್ಕ್ಯವತಾರಿಯ ಮಾತು-ಮುಂದೆ ಬರುತ್ತಾನೆ ಎಂಬುದರ ಹೊರತಾಗಿ ಒಬ್ಬರಿಗೂ ಕೈಗೆ ಸಿಕ್ಕುವವನಲ್ಲದವನಾಗಿದ್ದಾನೆ.

ಆದರೆ ಇದಾವ ರೀತಿಯ ಅನ್ಯಥಾಶಂಕೆಗಳನ್ನು ಮಾಡಬೇಕಿಲ್ಲದಂತೆ 'ಏನತ್ತರುವಾಹಿ ನಿಲಮುಂಗೈ ಎಳಿಲ್ ಕೊಂಡ ಜ್ಞಾನತ್ತಿನ್ ಒಳಿಯುರುವೈ' ಎಂದೂ ''ಏನತ್ತುರುವಾಯ್ ಇಡನ್ದ ಜ್ಞಾನಪ್ಪಿರಾನ್'' ಎಂದೂ ಹೇಳಲ್ಪಡುವಂತೆ ಸದ್‌ಜ್ಞಾನವನ್ನು ನೀಡುವ ಮಹೋಪಕಾರಕನಾಗಿಯೂ' 'ಪನ್ರಿಯಾಯನ್ರು ಪಾರಹಂ ಕೀಣ್ಡ ಪಾಳಿಯಾನ್ ಆಳಿಯಾನರುಳೇ' ''ನನ್ರುನಾನಯ್ಯ'' ಎಂದು ಜ್ಞಾನಿಗಳಾದವರೂ (ಆಳ್ವಾರುಗಳೂ)ವಿಶ್ವಸಿಸುವಂತಹ ಕೃಪಾತಿಶಯವುಳ್ಳವನಾದ್ದರಿಂದಲೂ, 'ಆದಿ ಮುನೇನಮುಮಾಹಿ ಅರಣಾಯಮೂರ್ತಿಯದು ನಮ್ಮೈಯಾಳುಮರಶೇ' ಎಂಬಂತೆ ರಕ್ಷಕತ್ವ ಪೂರ್ತಿಯುಳ್ಳವನಾದ್ದರಿಂದಲೂ, 'ಇರುಂಕರ್ಪಹಂ ಶೇರ್ ವಾನತ್ತವರ್ಕ್ಕುಂ ಅಲ್ಲಾತವರ್ಕ್ಕುಂ ಏನತ್ತುರುವಾಹಿ ಇಡನ್ದ ಞಾನಪ್ಪಿರಾನೈಯಲ್ಲಾಲ್ ಇಲ್ಲೈ ನಾನ್ ಕಂಡ ನಲ್ಲತುವೇ' ಎಂದು ನಮ್ಮಾಳ್ವಾರ್ ತಮ್ಮ ಪ್ರಥಮ ಪ್ರಬಂಧದಲ್ಲೇ ಸರ್ವರಿಗೂ ಇವನಲ್ಲದೆ ಬೇರಾರೂ ರಕ್ಷಕರಿಲ್ಲ ಎಂದು ನಿರ್ಣಯಿಸಿ ತಮ್ಮ ಕೊನೆಯ ಪ್ರಬಂಧದ ಕೊನೆಯಲ್ಲೂ ''ನೀಲವರೈ ಇರಂಡು ಪಿರೈಕವ್ವಿ ನಿಮಿರ್ನ್ದದೊಪ್ಪ, ''ಕೋಲವರಾಹವೊನ್ರಾಯ್ ನಿಲಂಕೋಟ್ಟಿಡೈ ಕೊಂಡ ಎನ್ದಾಯ್'' ನೀಲಕ್ಕಡಲ್ ಕಡೈನ್ದಾಯ್ ಉನ್ನೈ ಪೆತ್ತಿನಿಪೋಕ್ಕುವನೋ'' ಎಂದು ಎಲ್ಲಾ ಅವತಾರಗಳಿದ್ದರೂ ವರಾಹಾವತಾರದಲ್ಲಿ ತಾವು ಅನಂತವಾದ ಆನಂದವನ್ನು ಪಡೆದದ್ದನ್ನು ಮುಕ್ತಕಂಠದಿಂದ ಹಾಡಿದ್ದಾರೆ. ಹೀಗೆ ವರಾಹನ ರಕ್ಷಕತ್ವವು ಉತ್ತಾರಕವಾದ ರಕ್ಷಕತ್ವವಾದ್ದರಿಂದಲೂ, ಇವನು ಮಾಡುವ ರಕ್ಷಣವು ವಾತ್ಸಲ್ಯ ಮೂಲವೆಂಬುದಾಗಿಯೂ

'ಏನಮಾಯ್ ನಿಲಂ ಕೀಣ್ಡ ಎನ್ನಪ್ಪನೇ' ಎಂದೂ 'ಆಪ್ಪನೂನ್ರಿಯಿಡನ್ದಿಯಿತ್ತಿಲ್ ಕೊಂಡನಾಳ್' ಎಂದು ವಾತ್ಸಲ್ಯಾವಿನಾ ಭೂತವಾದ ಪಿತೃತ್ವ ಇವನಿಗೆ ಉಂಟೆಂದೂ ಹೇಳುವುದರಿಂದಲೂ, ವರಾಹಾತಾರವೇ ಸರ್ವೋತ್ಕೃಷ್ಟವಾದದ್ದಾಗಿದೆ. ಸಕಲಲೋಕ ಪಿತಾವಾದ ಇವನನ್ನು ಸಕಲ ಲೋಕಮಾತಾ ಆದ ಭೂಮಿದೇವಿ

'ಅಹಂ ಶಿಷ್ಯಾಚ ದಾಸೀಚ ಭಕ್ತಾಚ ತವ ಮಾಧವ।
ಮತ್ಕೃತೇ ಸರ್ವಭೂತಾನಾಂ ಲಘೂಪಾಯಂ ವದಪ್ರಭೋ ।

ನಾನು ಶಿಷ್ಯಳಾಗಿಯೂ, ದಾಸಿಯಾಗಿಯೂ, ಭಕ್ತಳಾಗಿಯೂ ಇರುವುದರಿಂದ ಸಕಲ ಪ್ರಾಣಿಗಳೂ ಉಜ್ಜೀವಿಸುವಂತಹ ಲಘುವಾದ ಉಪಾಯವನ್ನು ಅನುಗ್ರಹಿಸಬೇಕು' ಎಂದು ಪ್ರಾರ್ಥಿಸಲು ಆ ಭೂದೇವಿಯನ್ನು ಕುರಿತು ಪರಮಾತ್ಮನು ತಾನೇ ಸ್ವತಃ ಉಪದೇಶಿಸಿದ್ದೇ ವರಾಹಪುರಾಣವಾಗಿದೆ. ಆದ್ದರಿಂದ ಈ ವರಾಹಪುರಾಣವು ಎಲ್ಲ ಪುರಾಣಗಳಿಗಿಂತ ಉತ್ಕೃಷ್ಟವಾದದ್ದಾಗಿದೆ.

'ಪಾಮ್ಬಣೈಯಾರ್ಕ್ಕುಂ ತಂ ಪಾಮ್ಬುಪೋಲ್ ನಾವುಂ ಇರಣ್ಡುಳ ವಾಯಿತ್ತು' ಎಂದು (ಹಾವಿನ ಹಾಸಿಗೆಯಲ್ಲಿ ಮಲಗಿದವನಿಗೂ ಹಾವಿನಂತೆ ಎರಡು ನಾಲಿಗೆಯಾಯಿತು) ಎಂದು ಆಂಡಾಳ್ ಹೇಳುವಂತೆ ವರಾಹನಮಾತೂ ನಂಬಲು ಅನರ್ಹವೋ ಎಂದರೆ.

''ಶೆಮ್ಮೈ ಯುಡೈಯ ತಿರುವರಂಗರ್ ತಾಮ್ ಪಣಿತ್ತ ಮೆಯ್ಮ್ಮೈ ಪ್ಪೆರುವಾರ್ತ್ತೈ ವಿಟ್ಟುಚಿತ್ತರ್ ಕೇಟ್ಟಿರುಪ್ಪರ್'' 'ಎಂದಿದ್ದರೂ ವಿರಹತಾಪದಿಂದ ಕಾತರಳಾಗಿ ಆದಿಶೇಷನ ಸಹವಾಸದೋಷದಿಂದ ಪರಮಾತ್ಮನ ಮಾತೂ ಸುಳ್ಳಾದೀತೋ' ಎಂದು ಆಂಡಾಳ್ ಅತಿಶಂಕೆ ಮಾಡಿದ್ದಾಳೆಯೇ ವಿನಃ ಮತ್ತೊಂದಲ್ಲ.

-'ಪಾರ್ವಣ್ಣ ಮಡಮಂಗೈ ಪತ್ತರ್' ಎಂಬತೆ ದೇವಿಯ ವಿಷಯದಲ್ಲುಳ್ಳ ಭಾವಬಂಧದಿಂದ ಪ್ರಳಯಾರ್ಣವ ಮಗ್ನಳಾದ ಭೂಮಿಯನ್ನು ಮೇಲೆತ್ತಿ, ಇವಳ ಕ್ಲೇಶವನ್ನು ಪರಿಹರಿಸಿದ ಮೇಲೂ, ಸಂಸಾರ ಸಾಗರದಲ್ಲಿ ಮುಳುಗಿದ ತನ್ನ ಮಕ್ಕಳ ದುಃಖ ನಿವೃತ್ತಿಗಾಗಿ ಸುಕರವಾದ ಯಾವ ಉಪಾಯವನ್ನೂ ಕಾಣದೆ ವಿಷಣ್ಣಳಾಗಿ ದುಃಖಿಸುತ್ತಿದ್ದ ಇವಳು, ಪರಮಾತ್ಮನ ಮಾತನ್ನು ಕೇಳಿ ಉಲ್ಲಸಿತಳಾದ್ದರಿಂದ ವರಾಹ ಮೂರ್ತಿಯ ಮಾತುಗಳಲ್ಲಿ ಅತಿಶಂಕೆಗೆ ಆಸ್ಪದವೇ ಇಲ್ಲವಾಗಿದೆ. ಆದ್ದರಿಂದ ಭಗವಂತನ ಇತರ ಅವಸ್ಥಾಂತರಗಳಂತಲ್ಲದೆ, ವರಾಹಾವಸ್ಥೆಯಲ್ಲಿ ತನಗೆ ಅನುಗ್ರಹಿಸಿದ ಮಾತುಗಳನ್ನು ಅವನು ತಪ್ಪುವುದಿಲ್ಲವೆಂಬುದನ್ನು

'ಪಾಶಿತೂರ್ತ್ತುಕ್ಕಿಡಂದ ಪಾರ್ಮಹಟ್ಕು ಪಂಡೊರುನಾಳ್..............<br>
ಮಾಶುಡಂಬಿಲ್ ನೀರ್‌ವಾರಾ ಮಾನಮಿಲಾ ಪ್ಪನ್ರಿಯಾಂ<br>
ತೇಶುಡೈಯ ತೇವರ್ ತಿರುವರಂಗಚ್ಚೆಲ್ವನಾರ್<br>
ಪೇಶಿಯಿರುಪ್ಪನಹ್ ಪೇರ್ಕ್ಕವುಂ ಪೇರಾವೇ'--॥(ನಾಚ್ಚಿಯಾರ್ ತಿರುಮೊಳಿ)।

ಕೆಸರಲ್ಲಿ ಮುಳುಗಿ ತನ್ನ ಸ್ಥಾನಮಾನಗಳನ್ನು ಲೆಕ್ಕಿಸದೆ ಒಂದು ಹಂದಿಯಾಗಿ ಭೂಮಿಯನ್ನು ಮೇಲೆತ್ತಿದ ಪರಮ ತೇಜೋಮೂರ್ತಿಯಾದ ಶ್ರೀರಂಗನಾಥ ಮಾತುಗಳು ಎಂದೂ ತಪ್ಪುವುದಿಲ್ಲ'' ಎಂದು ಆಂಡಾಳೇ ಹಾಡಿದ್ದಾಳೆ.

ಆದ್ದರಿಂದ ಈ ವರಾಹಪುರಾಣವು ಸರ್ವೋತ್ಕೃಷ್ಟ ಎಂಬುದು ನಿಸ್ಸಂದೇಹ ವಾದದ್ದಾಗಿದೆ. ಈ ಪುರಾಣದಲ್ಲಿ ಪರಮಾತ್ಮನು ಉಪದೇಶಿಸಿದ ಉಪಾಯಗಳಲ್ಲೆಲ್ಲಾ ಗಾನರೂಪವಾದ ಉಪಾಯವೇ ಅತ್ಯಂತ ಶ್ರೇಷ್ಠವಾದದ್ದು. ವರಾಹ ತಿಳಿಸುವ ಎಲ್ಲ ಉಪಾಯಗಳನ್ನೂ ಕೇಳಿದ ಭೂಮಿದೇವಿ ಎಲ್ಲವನ್ನೂ ಬಿಟ್ಟು ಈ ಗಾನರೂಪ ಉಪಾಯವನ್ನೇ ಆಶ್ರಯಿಸುತ್ತಾಳೆ.

ಭೂಮಿದೇವಿ ತಾನು ಆಂಡಾಳಾಗಿ ಅವತರಿಸಿದಾಗ,

'ಪಾರ್ಕಡಲುಳ್ ಪೈಯತ್ತುಯಿನ್ರ ಪರಮನಡಿ ಪಾಡಿ'- ಕ್ಷೀರಾಬ್ಧಿ ನಾಥನ ಚರಣಗಳನ್ನು ಹಾಡಿ

'ಓಂಗಿ ಉಲಹಳನ್ದ ಉತ್ತಮನ್ ಪೇರ್‌ಪಾಡಿ'- ಮೇರೆಮೀರಿ ಬೆಳೆದ (ತ್ರಿವಿಕ್ರಮನ) ಉತ್ತಮನ ನಾಮಗಳನ್ನು ಹಾಡಿ

''ತೂಮಲರ್ ತೂವಿತ್ತೊಳುದು ವಾಯಿನಾಲ್ ಪಾಡಿ'' ಪರಿಶುದ್ಧವಾದ ಪುಷ್ಪಗಳನ್ನು ಸಮರ್ಪಿಸಿ ಬಾಯಿಂದ ಹಾಡಿ.

'ನಾರಾಯಣನ್ ಮೂರ್ತಿ ಕೇಶವನ್ನೈ ಪ್ಪಾಡವುಂ'- ನಾರಾಯಣನಾದ ಕೇಶವನನ್ನು ಹಾಡಲು

'ಪಾವಾಯ ಎಳುಂದಿರಾಯ್ ಪಾಡಿಪ್ಪರೈಕ್ಕೊಂಡು'-ಬಾಲೇ ಏಳು ಹಾಡಿ ಪುರುಷಾರ್ಥವನ್ನು ಪಡೆಯೋಣ

'ಮುತ್ತಂ ಪುಹುಂದು ಮುಹಿಲ್ ವಣ್ಣನ್ ಪೇರ್ ಪಾಡಿ- ಅಂಗಳವನ್ನು ಹೊಕ್ಕುಮೋಡದ ಬಣ್ಣವುಳ್ಳವನನ್ನು - ಹಾಡಿ

'ಮನತ್ತುಕ್ಕಿನಿಯಾನ್ನೈ ಪ್ಪಾಡವುಂ'-ಮನಸ್ಸಿಗೆ ಸವಿಯಾಗಿರುವುವವನನ್ನು ಹಾಡಿ

'ಕಿಳ್ಳಿ ಕ್ಕಳೈಂದಾನ್ನೈ ಕೀರ್ತಿಮೈಪ್ಪಾಡಿ'-ಅಸುರರನ್ನು ಕಿತ್ತು ಬಿಸುಟವನ ಕೀರ್ತಿಯನ್ನು-ಹಾಡಿ

'ಪಂಗಯಕ್ಕಣ್ಣಾನೈ ಪ್ಪಾಡ-ತಾವರೆಯಂತಹ ಕಣ್ಣುಳ್ಳವನನ್ನು ಹಾಡಲು

'ಮಾತ್ತಾರೈ ಮಾತ್ತಳಿಕ್ಕ ವಲ್ಲಾನೈಪ್ಪಾಡ'- ಶತ್ರುಗಳ ಶತ್ರುತ್ವವನ್ನು ನಾಶಮಾಡುವವನನ್ನು ಹಾಡಲು

'ತೂಯೋಮಾಯ್ ವಂದೋ ತುಯಿಲೆಳಪ್ಪಾಡುವಾನ್' - ಪರಿಶುದ್ಧ ರಾಗಿ ಬಂದವು ಸುಪ್ರಭಾತ ಹಾಡಲು

'ತಿರುತ್ತಕ್ಕ ಶೆಲ್ವಮುಂ ಶೇವಹಮುಂ ಯಾಂ ಪಾಡಿ'- ಶ್ರೀಮಹಾ ಲಕ್ಷ್ಮಿಗೆ ಅನುಗುಣವಾದ ಸಿರಿಯನ್ನೂ ಶೌರ್ಯವನ್ನೂ ಹಾಡಿ

'ಗೋವಿಂದಾ ಉನ್‌ತನ್ನೈ ಪಾಡಿಪ್ಪರೈಕೊಂಡು '-ಗೋವಿಂದನೇ ನಿನ್ನನ್ನು ಹಾಡಿ ಪುರುಷಾರ್ಥವನ್ನು ಪಡೆದುಕೊಂಡು ಎಂಬುದಾಗಿ ತಾನು ಹಾಡಿದ 'ತಿರುಪ್ಪಾವೈ' ದಿವ್ಯಶಾಸ್ತ್ರದಲ್ಲಿ ಭಗವನ್ನಾಮ, ಗುಣ ಸಂಕೀರ್ತನವನ್ನೇ ವಿಶೇಷವಾಗಿ ತಿಳಿಸುತ್ತಾಳೆ. ತಾನೂ ಅದನ್ನೇ ಅನುಷ್ಠಿಸಿ ತೋರಿದ್ದಾಳೆ. ಹಲವು ಪ್ರದೇಶಗಳಲ್ಲಿ ತಾನು ಹಾಡಿದ್ದನ್ನು ಹಾಡಿ 'ಪಾಡವಲ್ಲ ನಾಚ್ಚಿಯಾರ್' ಎಂದು ಪ್ರಸಿದ್ಧಿ ಪಡೆದದ್ದರಿಂದಲೂ, ಈ ಕೀರ್ತನರೂಪವಾದ ಉಪಾಯವೇ ಪ್ರಧಾನವಾದದ್ದೆಂದು ಭೂಮಿ ದೇವಿಯನ್ನು ಕುರಿತು ವರಾಹಪರಮಾತ್ಮನು ಉಪದೇಶಿಸಿದ್ದಾನೆ ಎಂಬುದು ಸ್ಪಷ್ಟವಾಗಿದೆ.

★★★

ಶ್ರೀಃ

ಶ್ರೀಮತೇ ರಾಮಾನು ಜಾಯ ನಮಃ ।

# ಶ್ರೀ ಕೈಶಿಕ ಪುರಾಣ ಪ್ರಾರಂಭವು

ಶ್ರೀ ವರಾಹ ಉವಾಚ :

ಜಾಗರೇತು ವಿಶಾಲಾಕ್ಷೀ ಜಾನತೋ ವಾಪ್ಯ ಜಾನತಃ ।
ಯೋಮೇ ಪ್ರಗಾತೇ ಧ್ಯೇಯಂ ಮಮ ಭಕ್ತ್ಯಾ ವ್ಯವಸ್ಥಿತಃ ॥ 1 ॥

ಈ ಶ್ಲೋಕದಲ್ಲಿ ತನ್ನನ್ನು ಕುರಿತು ಗಾನಮಾಡುವವನ ಲಕ್ಷಣವನ್ನು ಪರಮಾತ್ಮನಾದ ವರಾಹನು ನಿರೂಪಿಸುತ್ತಾನೆ.

ಗಾನವಮಾಡುವವನೊಬ್ಬನು ಜಾಗೃತವ್ರತ ನಿಷ್ಠನಾಗಿ 'ಬ್ರಾಹ್ಮೇ ಮುಹೂರ್ತೇ ಚೋತ್ಥಾಯ' ಎಂಬತೆ ಬ್ರಾಹ್ಮಮುಹೂರ್ತದಲ್ಲಿ ಬಂದು ನಾನು ಮುಖಕೊಟ್ಟು ಕೇಳಿದರೂ ಸರಿ ಅಥವಾ ಜಗದ್ರಕ್ಷಣ ಚಿಂತೆಯಲ್ಲಿ ಅನ್ಯಪರನಾಗಿದ್ದರೂ ಸರಿ ನನ್ನ ಗುಣಚೇಷ್ಟಿತಗಳ ವರ್ಣನೆಗಳಿಂದ ತುಂಬಿದ ಗಾಥೆಗಳನ್ನು ಯಾವ ಫಲಾಪೇಕ್ಷೆಯೂ ಇಲ್ಲದೆ,ಕೇವಲ ನನ್ನಲ್ಲಿ ಉಳ್ಳ ಭಕ್ತ್ಯತಿಶಯತೆಯಿಂದ ನನಗಾಗಿಯೇ ಹಾಡಬೇಕು. ಎಂದು ಭೂಮಿಯನ್ನು ನೋಡಿ ತಿಳಿಸಿದನು.

ಯಾವಂತೀ ತ್ವಕ್ಷರಾಣ್ಯಸ್ಯ ಗೀಯಮಾನೇ ಯಶಸ್ವಿನೀ ।
ತಾವದ್ವರ್ಷೇ ಸಹಸ್ರಾಣಿ ಸ್ವರ್ಗಲೋಕೇ ಮಹೀಯತೇ ॥ 2 ॥

ಹೀಗೆ ನಿನ್ನ ಹಾಗೂ ನನ್ನ ಕೀರ್ತಿಗಳಿಂದ ತುಂಬಿದ ಗಾಥೆಗಳನ್ನು ನಮಗಾಗಿ ಗಾನಮಾಡಿದರೆ ಆ ಗಾಥೆಗಳಲ್ಲಿನ ಒಂದೊಂದು ಅಕ್ಷರಗಳಲ್ಲೂ ತುಂಬಿದ ವಿಶೇಷವಾದ ಗೇಯುತೆಯಿಂದ, ಒಂದೊಂದು ಅಕ್ಷರಕ್ಕೂ ಸಾವಿರ ಸಾವಿರ ವರ್ಷ ಸ್ವರ್ಗಲೋಕದಲ್ಲಿರುವವನು 'ನಂಪಾಡುವಾನ್'_ ನಮ್ಮನ್ನು ಗಾನಮಾಡುವವನು.

ರೂಪವಾನ್ ಗುಣವಾನ್ ಶುದ್ಧಃ ಸರ್ವಧರ್ಮಭೃತಾಂ ವರಃ ।
ನಿತ್ಯಂ ಪಶ್ಯತಿ ವೈ ಶಕ್ರಂ ವಜ್ರಹಸ್ತಂ ನ ಸಂಶಯಃ ॥ 3 ॥

ಅವನು ಸ್ವರ್ಗಲೋಕದಲ್ಲಿರುವ ಪರ್ಯಂತ ಅಲ್ಲಿರುವವರೆಲ್ಲರಿಗಿಂತ ಅತಿ ಸುಂದರನಾಗಿಯೂ, ಗುಣವಂತನಾಗಿಯೂ, ಸ್ವರ್ಗಲೋಕಸುಖದಲ್ಲಿ ಯಾವ ಆಸಕ್ತಿಯೂ ಇಲ್ಲದವನಾಗಿಯೂ, ಸರ್ವಧರ್ಮಗಳನ್ನೂ ಅರಿತು ಅಲ್ಲೂ ನಮ್ಮನ್ನು ಮರೆಯದೆ ಇರುತ್ತಾನೆ. ಆ ಸ್ವರ್ಗಕ್ಕೆ ಅಧಿಪತಿಯಾದ ದೇವೇಂದ್ರನು ತನ್ನ ಆಯುಧಗಳೊಡನೆ ಬಂದು ನಮಸ್ಕರಿಸುತ್ತ ನಿಲ್ಲಲ್ಲು ತನ್ನ ಕಡೆಗಣ್ಣ ಕಟಾಕ್ಷವನ್ನು ಬೀರುತ್ತಿರುತ್ತಾನೆ.

ಮದ್ಭಕ್ತಶ್ಚಾಸಿ ಜಾಯತೇ ಇಂದ್ರೇರ್ಣ್ಯೆಪದೇ ಸ್ಥಿತ : ।
ಸರ್ವಧರ್ಮ ಗುಣಃ ಶ್ರೇಷ್ಠಃ ತತ್ರಾಪಿ ಮಮ ಲುಬ್ಧಕ: ॥ 4 ॥

ಈ ರೀತಿ ಇಂದ್ರನಿಂದ ಸೇವಿಸಲ್ಪಡುತ್ತಿದ್ದರೂ ಇಂದ್ರನಂತೆ ನಮ್ಮನ್ನು ಮರೆಯದೆ ನನಗೆ ಆರಾಧನರೂಪವಾದ ಕರ್ಮಗಳನ್ನು ನಡೆಸುತ್ತ ನನ್ನನ್ನೇ ಅನುಸಂಧಾನ ಮಾಡುತ್ತಾನೆ.

ಇಂದ್ರಲೋಕಾತ್ ಪರಿಭ್ರಷ್ಟೋ ಮಮಗೇಯ ಪರಾಯಣಃ ।
ಪ್ರಯುಕ್ತಃ ಸರ್ವ ಸಂಸಾರೈಃ ಮಮ ಲೋಕಂಚ ಗಚ್ಛತಿ ॥ 5 ॥

ಇಂದ್ರಲೋಕದಲ್ಲಿರುವ ಪರ್ಯಂತ ಅಲ್ಲಿರುವವರೆಲ್ಲರನ್ನೂ ಆಹ್ವಾನಿಸಿ ನನ್ನ ಗುಣ ಸಂಕೀರ್ತನಗಳನ್ನು ಕೇಳಿಸುತ್ತಾನೆ. ನನ್ನನ್ನೇ ಅನವರತ ಗಾನ ಮಾಡುವುದರಿಂದ ಅಲ್ಲಿಂದ ಇವನನ್ನು ಕರೆದೊಯ್ದು ನನ್ನ ಪರಮ ಪದದಲ್ಲಿ ''ಏತತ್ರ ಸಾಮಗಾಯ ನ್ನಾಸ್ತೇ'' ಎಂದು ನಿರಂತರವಾಗಿ ನನಾಗಾಗಿಯೇ ಹಾಡುವಂತೆ ಅವನಿಗೆ ಕೃಪೆ ಮಾಡುತ್ತೇನೆ.

ಏವಂತು ವಚನಂ ಶ್ರುತ್ವಾ ತತ್ಪ್ರಸಾದಾತ್ ವಸುಂಧರಾ ।
ವರಾಹ ರೂಪಿಣಂ ದೇವಂ ಪ್ರತ್ಯುವಾಚ ಶುಭಾನನಾ ॥ 6 ॥

ಈ ರೀತಿ ವರಾಹ ಪರಮಾತ್ಮನು ಹೇಳಿದ್ದನ್ನು ಕೇಳಿ, ತನ್ನ ಅಂತರಂಗದ ಆನಂದವೆಲ್ಲವೂ ಮುಖದಲ್ಲಿ ತೋರುವಂತೆ, ಅರಳಿದ ಮುಖವುಳ್ಳವಳಾಗಿ ಭೂದೇವಿಯು ಹೀಗೆ ಹೇಳಿದಳು.

ಅಹೋಗೀತ ಪ್ರಭಾವೋವೈ ಯಸ್ತ್ವಯಾ ಪ್ರಕೀರ್ತಿತಃ ।
ಕಶ್ಚಗೀತೀ ಪ್ರಭಾವೇನ ಸಿದ್ಧಿಂ ಪ್ರಾಪ್ತೋ ಮಹಾತಪಾಃ ॥ 7 ॥

ನಿಮ್ಮ ನಾಮ ಸಂಕೀರ್ತನ ಪ್ರವಾಹವನ್ನು ವೇದಗಳಾಗಲೀ ಋಷಿಗಳಾಗಲೀ ಕೊಂಡಾಡದೆ ತಾವೇ ಈ ರೀತಿ ಕೊಂಡಾಡುವಂತಿದೆಯಲ್ಲಾ. ಇಂತಹ ಉತ್ಕೃಷ್ಟವಾದ ಗೀತ ಪ್ರಭಾವದಿಂದ ತಮ್ಮ ಪಾದ ಕಮಲಗಳನ್ನು ಪಡೆದವನು ಯಾರು? ಅದನ್ನು ತಿಳಿಸ ಬೇಕು ಎಂದು ಪ್ರಾರ್ಥಿಸಿದಳು.

ಶ್ರೀವರಾಹ ಉವಾಚ :

ಶೃಣುತತ್ವೇನ ತೇ ದೇವಿ ಕಥ್ಯಮಾನಂ ಯಶಸ್ವಿನಂ ।
ಯಸ್ತುಗೀತ ಪ್ರಭಾವೇಣ ಸಿದ್ಧಿಂ ಪ್ರಾಪ್ತೋ ಮಹಾತಪಾಃ ॥ 8 ॥

ಹೀಗೆ ತನ್ನನ್ನು ಪ್ರಾರ್ಥಿಸಿದ ಭೂದೇವಿಯನ್ನು ಕುರಿತು ವರಾಹ ಭಗವಾನ್ ಹೀಗೆ ನುಡಿದನು.

''ಪಾಂಪ್ಪಣೈಯಾರ್ಕ್ಕುಂ ತಂ ಪಾಂಬುಪೋಲ್ ನಾವುಂ ಇರಂಡಳು ವಾಯಿತ್ತು'' ಎಂದು ನೀನು ನನ್ನನ್ನು ಹೇಳಿದಂತೆ ನಾನು ನಿನ್ನೊಡನೆ ರಸಿಕ ತನದ ಶೃಂಗಾರ ಚೇಷ್ಟಯಿಂದ ಹೇಳುವ ಮಾತಲ್ಲ. ಇದು ಸತ್ಯವಾದ ಮಾತು. ಯಾವೊಬ್ಬನು ನನ್ನನ್ನು ಗಾನ ಮಾಡಿ ನನ್ನ ಪರಮ ಪದವನ್ನು ಪಡೆದನೋ ಅವನನ್ನು ಕುರಿತು ಹೇಳುತ್ತೇನೆ ಕೇಳು ದೇವಿ.

''ಅಸ್ತಿ ದಕ್ಷಿಣ ದಿಗ್ಭಾಗೇ ಮಹೇಂದ್ರೋ ನಾಮ ಪರ್ವತಃ ।
ತತ್ರ ಕ್ಷೀರನದೀ ಪುಣ್ಯಾ ದಕ್ಷಿಣೇ ಸಾಗರಂಗಮಾ ॥ 9 ॥

ದಕ್ಷಿಣ ದಿಕ್ಕಿನಲ್ಲಿ ಮಹೇಂದ್ರವೆಂಬ ಪರ್ವತವು ಪ್ರಸಿದ್ಧವಾಗಿದೆ. ಅಲ್ಲಿ ಕ್ಷೀರನದಿ ಎಂಬುದು ದಕ್ಷಿಣ ಸಮುದ್ರಗಾಮಿನಿಯಾಗಿ ಹರಿಯುತ್ತದೆ.

ತತ್ರ ಸಿದ್ಧಾಶ್ರಮೇ ಭದ್ರೇ ಚಂಡಾಲಃ ಕೃತ ನಿಶ್ಚಯಃ ।
ದೂರಾಜ್ಜಾಗರಣೇ ಗಾತಿ ಮಮ ಭಕ್ತ್ಯಾವ್ಯವಸ್ಥಿತಃ ॥ 10 ॥

ಪೂರ್ವದಲ್ಲಿ ನಾನೂ ನೀನೂ ''ಕುರುಂಗುಡಿ'' ಎಂದು ಕಟ್ಟಿದ ಆಶ್ರಮದಲ್ಲಿ ಪಾಪಯೋನಿಯಲ್ಲಿ ಹುಟ್ಟಿದವನೊಬ್ಬನು, ನಮ್ಮನು ಗಾನ ಮಾಡಬೇಕೆಂದು ಸಂಕಲ್ಪಿಸಿ ಜಾಗೃತ ವ್ರತ ನಿಷ್ಠನಾಗಿ, ನಮ್ಮಲ್ಲಿ ಅತಿಶಯವಾದ ಭಕ್ತಿಯಿಂದ ಬ್ರಾಹ್ಮ ಮುಹೂರ್ತದಲ್ಲೇ ಬಂದು, ತನ್ನ ಜಾತಿಗನುಗುಣವಾಗಿ ದೂರದಲ್ಲೇ ನಿಂತು ನನ್ನನು ಗಾನ ಮಾಡುತ್ತಿದ್ದನು.

ಏವಂತು ಗಾಯಮಾನಸ್ಯ ಗತಾಃ ಸಂವತ್ಸರಾ ದಶಾ ।
ಶ್ವಪಾಕಸ್ಯ ಗುಣಜ್ಞಸ್ಯ ಮದ್ಭಕ್ತಸ್ಯ ವಸುಂಧರೇ ॥ 11 ॥

ಈ ರೀತಿ ಅಂತ್ಯಜಾತಿಯಲ್ಲಿ ಜನಿಸಿದ್ದರೂ, ನನ್ನ ಗುಣಾನುಸಂಧಾನವನ್ನು ಮಾಡಿ, ನನ್ನ ಪರಮ ಭಕ್ತನಾಗಿ, ಹತ್ತು ವರ್ಷಗಳ ಕಾಲ ನನ್ನನ್ನು ಗಾನ ಮಾಡಿದನು.

ಕೌಮುದಸ್ಯತು ಮಾಸಸ್ಯ ದ್ವಾದಶ್ಯಾಂ ಶುಕ್ಲ ಪಕ್ಷಕೇ ।
ಸುಪ್ತೇ ಜನೇ ಗತೇ ಯಾಮೇ ವೀಣಾಮಾದಾಯ ನಿರ್ಯಯೌ ॥ 12 ॥

ಕಾರ್ತಿಕ ಮಾಸದಲ್ಲಿ ಶುಕ್ಲ ಪಕ್ಷ ದ್ವಾದಶಿಯ ರಾತ್ರಿ ಒಂದು ಯಾಮಕ್ಕೆ ಮೇಲೆ ಎಲ್ಲರೂ ನಿದ್ರಿಸುತ್ತಿರುವಾಗ, ತಾನು ಜಾಗರಣ ವ್ರತ ನಿಷ್ಠನಾದುದರಿಂದ ಎಚ್ಚರವಾಗಿದ್ದುಕೊಂಡು, ನನ್ನ ದೇವಾಲಯದ ಸಮೀಪಕ್ಕೆ ಬಂದು ನನ್ನನ್ನು ಗಾನಮಾಡಲು ತನ್ನ ಮನೆಯಿಂದ ಹೊರಟನು.

ಗತೋ ವರ್ತ್ಮನಿ ಚಂಡಾಲೋ ಗೃಹೀತೋ ಬ್ರಹ್ಮರಕ್ಷಸಾ ।
ಅಲ್ಪಪ್ರಾಣಃ ಶ್ವಪಾಕೋ ವೈ ಬಲವಾನ್ ಬ್ರಹ್ಮರಾಕ್ಷಸಃ ॥ 13 ॥

ಹೀಗೆ ಆ ಭಕ್ತನು ಬರುತ್ತಿರಲು ಮಾರ್ಗಮಧ್ಯದಲ್ಲಿ ಒಬ್ಬ ಬ್ರಹ್ಮರಾಕ್ಷಸನಿಂದ ತಡೆಯಲ್ಪಟ್ಟನು. ಆ ಬ್ರಹ್ಮರಕ್ಷಸ್ಸು ಭಯಂಕರನಾಗಿ ಬಲಿಷ್ಠನಾಗಿದ್ದನು. ಈ ನಂಪಾಡುವಾನ್-ಮಾರ್ದವ ಸ್ವಭಾವವುಳ್ಳವನಾಗಿದ್ದರಿಂದ ದುರ್ಬಲನಾಗಿ ಭಯ ಭೀತನಾದನು.

ದುಃಖೇನ ಸತು ಸಂತಪ್ತೋ ನ ಚ ಶಕ್ತೋ ವಿಚೇಷ್ಟಿತುಂ।
ಉವಾಚ ವಚನಂ ಮಂದಂ ಮಾತಂಗೋ ಬ್ರಹ್ಮರಾಕ್ಷಸಂ ॥ 14 ॥

ಈ ನಂಪಾಡುವಾನ್ ದುರ್ಬಲನಾದುದರಿಂದಲೂ, ಪರಾಕ್ರಮದಿಂದ ಬಿಡಿಸಿಕೊಳ್ಳಲು ಅಸಮರ್ಥನಾದುದರಿಂದಲೂ, ಬ್ರಾಹ್ಮಣನಲ್ಲದ್ದರಿಂದ ವೇದ ಮಂತ್ರಗಳನ್ನು ಉಚ್ಚರಿಸಿ ಬಿಡುಗಡೆ ಪಡೆಯಲೂ, ಸಾಧ್ಯವಾಗದೆ ನನ್ನಲ್ಲಿ ಶರಣಾಗತಿಯನ್ನು ಮಾಡಿದನು. ಅನಂತರ ಬ್ರಹ್ಮರಾಕ್ಷಸನನ್ನು ನೋಡಿ

ಗಚ್ಛಾಮಿ ಸಂತೋಷಯಿತುಂ ಅಹಂತು ಜಾಗರಣೇ ಹರಿಂ ।
ಗಾನೇನ ಪುಂಡರೀಕಾಕ್ಷಂ ಬ್ರಹ್ಮರಾಕ್ಷಸ ಮುಂಚ ಮಾ ॥ 15 ॥

''ಶಿತ್ತಂ ಶಿರುಕಾಲೇವನ್ದ್ನೈ ಶೇವಿತ್ತು'' ಎಂಬಂತೆ ಬೆಳ್ಳಂಬೆಳಗ್ಗೆಯೇ ಸರ್ವೇಶ್ವರನನ್ನು ಗಾನಮಾಡಿ ಪುರುಷಾರ್ಥವನ್ನು ಪಡೆಯಲು ಹೋಗುವ ನನ್ನನ್ನು ಬಿಟ್ಟುಬಿಡು. ಎಂದು ಕೇಳಿದನು.

ಏವಮುಕ್ತಃ ಶ್ವಪಾಕೇನ ಬಲವಾನ್ ಬ್ರಹ್ಮರಾಕ್ಷಸಃ ।
ಅಮರ್ಷವಶಮಾಪನ್ನೋ ನ ಚ ಕಿಂಚಿತ್ ತಮಬ್ರವೀತ್ ॥ 16 ॥

ಹೀಗೆ ನಂಪಾಡುವಾನ್ ಹೇಳಲು ಈ ಬ್ರಹ್ಮರಾಕ್ಷಸನು ಅತಿ ಕೋಪಗೊಂಡವನಾಗಿ ಯಾವೊಂದು ಮಾತನ್ನೂ ಆಡದೆ ಉದಾಸೀನನಾಗಿ ನಿಂತದ್ದನು.

ಆತ್ಮಾನಂ ಪ್ರತಿ ಧಾವಂತಂ ಚಂಡಾಲೋ ಬ್ರಹ್ಮರಾಕ್ಷಸಂ ।
ಕಿಂತ್ವಯಾ ಚೇಷ್ಟಿತವ್ಯಯಂ ಯೇ ಯ ಏವಂ ಪ್ರತಿಧಾವಸಿ ॥ 17 ॥

ಹೀಗೆ ಕೋಪಾಕ್ರಾಂತನಾಗಿ ಮೇಲೆ ಬೀಳಲು ಬರುತ್ತಿರುವ ಬ್ರಹ್ಮರಾಕ್ಷಸನನ್ನು ನೋಡಿ ನಂಪಾಡುವಾನ್ ಹೀಗೆ ನನ್ನ ಮೇಲೆ ಬಿದ್ದು ನೀನು ಪಡೆಯುವುದಾದರೂ ಏನನ್ನು ಎಂದು ಕೇಳಿದನು.

ಶ್ವಪಾಕ ವಚನಂ ಶ್ರುತ್ವಾ ತತೋವೈ ಬ್ರಹ್ಮರಾಕ್ಷಸಃ ।
ಉವಾಚ ವಚನಂ ಘೋರಂ ಮಾನುಷಾಹಾರ ಲೋಲುಪಃ ॥ 18 ॥

ಆ ಬ್ರಹ್ಮರಾಕ್ಷಸನು ತನ್ನ ಅಪಾರವಾದ ಹಸಿವಿನಿಂದ ಮನುಷ್ಯರ ಮಾಂಸದಲ್ಲಿ ಅತಿ ಆಸೆಯುಳ್ಳವನಾಗಿ ನಂಪಾಡುವಾನನ್ನು ಕುರಿತು ಕ್ರೂರ ವಾಕ್ಯಗಳನ್ನು ಆಡಿದನು.

ಅದ್ಯಮೇ ದಶರಾತ್ರಂ ವೈ ನಿರಾಹಾರಸ್ಯ ಗಚ್ಛತಃ ।
ಧಾತ್ರಾತ್ವಂ ವಿಹಿತೋ ಮಹ್ಯಮಾಹಾರಃ ಪರಿತೋ ಮಮ ॥ 19 ॥

''ನಿಹರಿಲ್ ವಣ್ ಪುಹಳ್ ಪಾಡಿ ಇಳೈಪ್ಪಿಲಂ'' ಎಂದು ನೀನು ಹತ್ತು ವರುಷ ಗಾನ ಮಾಡಿ ಆಯಾಸವೇ ಇಲ್ಲದವನಾಗಿ ಮುಗುಳ್ನಗುತ್ತಿರುವೆ. ನಾನು ಹತ್ತು ದಿನಗಳೂ ತಿಂದು ಉಪವಾಸದಿಂದ ಸೊರಗಿ ಅಲೆಯುತ್ತಿದ್ದೇನೆ. ಆದ್ದರಿಂದ ನನಗೆ ದೈವವು ಆಹಾರವಾಗಿ ಕಲ್ಪಿಸಿದ ನಿನ್ನನ್ನು ಬಿಡುವೆನೇ ಎಂದು ಅವರಿಸಲು ಬಂದನು.

ಅದ್ಯತ್ವಾಂ ಭಕ್ಷಯಿಷ್ಯಾಮಿ ಸವಸಾ ಮಾಂಸ ಶೋಣಿತಂ ।
ತರ್ಪಯಿತ್ವಾ ಯಥಾ ನ್ಯಾಯಂ ಯಾಸ್ಯಾಮಿ ಚ ಯಥೇಪ್ಸಿತಂ ॥ 20 ॥

ಈಗ ನಾನು ನಿ ನನ್ನು ಖಂಡಿತವಾಗಿಯೂ ಬಿಡುವುದಿಲ್ಲ. ನಿನ್ನ ಒಂದೊಂದು ಅವಯವಗಳನ್ನು ಬಿಡಿಬಿಡಿಯಾಗಿ ಕಿತ್ತು ರಕ್ತಮಾಂಸಗಳಿಂದ ದೇವತಾರಾಧನೆಯನ್ನು ಮಾಡಿ ನನ್ನ ಹಸಿವನ್ನು ಅಡಗಿಸಿಕೊಂಡು ಸನ್ನಿಚ್ಛೆಯಂತೆ ಹೋಗುತ್ತೇನೆ.

ಬ್ರಹ್ಮರಾಕ್ಷಸೋ ವಚಃ ಶ್ರುತ್ವಾ ಶ್ವಪಾಕೋ ಗೀತಲಾಲಸಃ
ರಾಕ್ಷಸಂ ಛಂದಯಾಮಾಸ ಮಮ ಭಕ್ತ್ಯಾ ವ್ಯವಸ್ಥಿತಃ ॥ 21 ॥

ಹೀಗೆ ಹೇಳಿದ ಬ್ರಹ್ಮರಾಕ್ಷಸನ ಮಾತನ್ನು ಕೇಳಿ ಶರೀರಹಾನಿ ಪರ್ಯಂತವಾದ ಆಪತ್ತು ಬಂದಿದ್ದರೂ, ನನ್ನಲ್ಲಿನ ಅತಿಶಯವಾದ ಭಕ್ತಿಯಿಂದ ಸುಸ್ಥಿತನಾಗಿ, ನನ್ನನ್ನು ಗಾನಮಾಡಬೇಕೆಂಬ ಬಯಕೆಯಿಂದ ಆ ರಾಕ್ಷಸನನ್ನು ಅನುವರ್ತಿಸಿ ಮಾತನಾಡತೊಡಗಿದನು.

ಶ್ರುಣುತತ್ವಂ ಮಹಾಭಾಗ ಭಕ್ತೋಽಹಂ ಸಮುಪಾಗತಃ ।
ಅವಶ್ಯಮೇತತ್ ಕರ್ತವ್ಯಮ್ ಗಾತ್ರಾ ದತ್ತಂ ಯಥಾ ತವ ॥ 22 ॥

ಎಲೈ ಮಹಾಭಾಗನೇ । ಯಥಾರ್ಥವಾದದ್ದನ್ನು ಹೇಳುತ್ತೇನೆ ಕೇಳು. ನೀನು ಹೇಳಿದಂತೆಯೇ ನಾನು ನಿನಗೆ ಆಹಾರ ವಾಗುತ್ತೇನೆ. ಬ್ರಹ್ಮನು ಸಂಕಲ್ಪಿಸಿದಂತೆ ನಾವಿಬ್ಬರೂ ನಡೆಯಬೇಕಾದದ್ದೇ ಧರ್ಮ.

ಪಶ್ಚಾತ್ ಖಾದಸಿ ಮಾಮ್ ರಕ್ಷೋ ಜಾಗರೇ ವಿನವರ್ತಿತೇ ।
ವಿಷ್ಣೋಃ ಸಂತೋಷಣಾರ್ಥಾಯ ಮಮೈತತ್ ವ್ರತ ಮುತ್ತಮ್ ॥ 23 ॥

ನನಗೊಂದು ನಿಯಮವುಂಟು. ಸರ್ವೇಶ್ವರನ ಪ್ರೀತ್ಯರ್ಥವಾಗಿ ಜಾಗರವ್ರತ ವೆಂಬ ಒಂದು ವ್ರತವುಂಟು. ಅದನ್ನು ಪೂರ್ಣಗೊಳಿಸಿ ನಾನು ಖಂಡಿತವಾಗಿಯೂ ಹಿಂತಿರುಗಿ ಬರುತ್ತೇನೆ. ನಿನಗೆ ಭಕ್ಷ್ಯವಾಗೇ ಆಗುತ್ತೇನೆ.

ರಕ್ಷ ಮಾಂ ವ್ರತಭಂಗಾತ್ ವೈ ದೇವಂ ನಾರಾಯಣಂ ಪ್ರತಿ ।
ಜಾಗರೇ ವಿನಿವೃತ್ತೇತು ಮಾಮ್ ಭಕ್ಷ್ಯ ಯಥೇಪ್ಸಿತಮ್ ॥ 24 ॥

ಭಗವಂತನಾದ ಶ್ರೀಮನ್ನಾರಾಯಣನನ್ನು ಕುರಿತು ನಾನು ಕೈಗೊಂಡ ವ್ರತಕ್ಕೆ ಭಂಗಬಾರದಂತೆ ನೀನು ನನ್ನನ್ನು ರಕ್ಷಿಸಬೇಕು. ಈ ಜಾಗರವ್ರತ ಸಮಾಪನವಾದ ಕೂಡಲೇ ನಿನ್ನಚ್ಛೆಯಂತೆ ನನ್ನನ್ನು ಭಕ್ಷಿಸು.

ಶ್ವಪಾಕಸ್ಯ ವಚಃ ಶ್ರುತ್ವಾ ಬ್ರಹ್ಮರಕ್ಷಃ ಕ್ಷುಧಾರ್ಥಿತಃ ।
ಉವಾಚ ಮಧುರಂ ವಾಕ್ಯಂ ಶ್ವಪಾಕಂ ತದನಂತರಮ್ ॥ 25 ॥

ಹೀಗೆ ನುಡಿದ ನಂಪಾಡುವಾವನ ಮಾತನ್ನು ಕೇಳಿದ, ಹಸಿವಿನಿಂದ ಕಂಗೆಟ್ಟಿದ್ದ ಬ್ರಹ್ಮರಾಕ್ಷಸನು ಮಧುರವಾದ ಒಂದು ಮಾತನ್ನಾಡಿದನು.

ಮೋಘಂ ಭಾಷಿಸಿ ಚಂಡಾಲ ಪುನರೇಷ್ಯಾಮಹಂತ್ವಿತಿ ।
ಕೋಹಿ ರಕ್ಷೋ ಮುಖಾತ್ ಭ್ರಷ್ಟಃ ತನ್ಮುಖಾಯಾಪಿ ವರ್ತತೇ ॥ 26 ॥

ಎಲೈ ಚಂಡಾಲನೇ ನಿನ್ನ ಜಾತಿಗನುಗುಣವಾಗಿದೆ ನಿನ್ನ ಮಾತು. ಹೋಗಿ ಮರಳಿ ಬರುತ್ತೇನೆಂದು ನೇರಾಗಿ ಅಸತ್ಯವನ್ನೇ ನುಡಿದೆಯಲ್ಲ. ಬ್ರಹ್ಮರಾಕ್ಷಸನ ಕೈಯಲ್ಲಿ ಸಿಕ್ಕಿ ತಪ್ಪಿಸಿಕೊಂಡ ಯಾರಾದರೂ ಹಿಂತಿರುಗಿ ಬರುವುದುಂಟೇ ?

ಬಹ್ವಃ ಸಂತಿ ಪಂಥಾನೋ ದೇಶಾಶ್ಚ ಬಹವಸ್ತಥಾ ।
ಆತ್ಮ ದೇಶಮ್ ಪರಿತ್ಯಜ್ಯ ಪರೇಷಾಂ ಗಂತುಮಿಚ್ಛಸಿ ॥ 27 ॥

ಈ ಮಾರ್ಗವಷ್ಟೇ ಅಲ್ಲದೆ, ಎಷ್ಟೋ ಬೇರೆ ದಾರಿಗಳುಂಟು. ನಿನ್ನ ದೇಶವನ್ನೇ ಬಿಟ್ಟು ನೀನು ದೇಶಾಂತರ ಹೋಗಲು ಇಚ್ಛಿಸುತ್ತಿರುವೆ.

**ಸ್ವಶರೀರವಿನಾಶಾಯ ನ ಚಾಗಚ್ಛತಿ ಕಶ್ಚನ ।**
**ರಕ್ಷಸೋ ಮುಖ ವಿಭ್ರಷ್ಟಃ ಪುನರಾಗಂತುಂ ಇಚ್ಛಸಿ ॥ 28॥**

ತನ್ನ ಶರೀರನಾಶವೇರ್ಪಡುವ ಸ್ಥಳವನ್ನುದ್ದೇಶಿಸಿ ಮರಳಿ ಯಾರಾದರೂ ಬರುವರೇ? ರಾಕ್ಷಸನ ಕೈಯಿಂದ ತಪ್ಪಿಸಿಕೊಂಡು ಮತ್ತೆ ಬರುವೆನೆಂದು ಅಸತ್ಯವನ್ನೇ ಹೇಳುವೆಯಲ್ಲ !

**ರಾಕ್ಷಸಸ್ಯ ವಚಶ್ಶ್ರುತ್ವಾ ಚಂಡಾಲೋ ಧರ್ಮಸಂಶ್ರಿತಃ ।**
**ಉವಾಚ ಮಧುರಂ ವಾಕ್ಯಂ ರಾಕ್ಷಸಂ ಪಿಶಿತಾಶನಂ ॥ 29 ॥**

ಹೀಗೆ ರಾಕ್ಷಸನು ನುಡಿದ ಮಾತುಗಳನ್ನು ಕೇಳಿ ಮಾಂಸ ಭಕ್ಷಣದಲ್ಲಿ ಆತ್ಯಾಪೇಕ್ಷೆಯುಳ್ಳ ಅವನನ್ನು ಕುರಿತು ಧರ್ಮಯುಕ್ತವೂ ಮಧುರವೂ ಆದ ಒಂದು ಮಾತನ್ನು ಆ ಗಾಯಕನು ಹೇಳಿದನು.

**ಯದ್ಯಪ್ಯಹಂ ಹಿ ಚಂಡಾಲಃ ಪೂರ್ವ ಕರ್ಮ ವಿದೂಷಿತಃ ।**
**ಪ್ರಾಪ್ತೋ ಹಂ ಮಾನುಷಂ ಭಾವಂ ವಿದಿತೇನಾಂತರಾತ್ಮನಾ ॥ 30 ॥**

ಪೂರ್ವ ಕರ್ಮ ದೋಷದಿಂದ ಈ ಚಂಡಾಲ ಜನ್ಮದಲ್ಲಿ ಹುಟ್ಟಿದ್ದರೂ, ಪರಮಾತ್ಮನ ಬಗ್ಗೆ ಜ್ಞಾನ ಏರ್ಪಟ್ಟಿರುವುದರಿಂದ ಒಬ್ಬ ಮನುಷ್ಯನಿಗಿರಬೇಕಾದ ಜ್ಞಾನ ನನಗೂ ಉಂಟು, ಆದ್ದರಿಂದ ದಯವಿಟ್ಟು ನನ್ನ ಮಾತುಗಳನ್ನು ಕೇಳುವಂತಹವನಾಗು.

**ಶೃಣು ತತ್ಸಮಯಂ ರಕ್ಷೋ ಏನಾಗಚ್ಛಾಮ್ಯಹಂ ಪುನಃ ।**
**ದೂರಾಜ್ಜಾಗರಣಂ ಕೃತ್ವಾ ಲೋಕನಾಥಸ್ಯ ತೃಪ್ತಯೇ ॥ ॥ 31 ॥**

ತ್ರೈಲೋಕ್ಯನಾಥನಾದ ಸರ್ವೇಶ್ವರನಿಗೆ ಸುಪ್ರಭಾತವನ್ನು ಗಾನಮಾಡಿ, ಜಾಗರಣವ್ರತವನ್ನು ಪೂರ್ತಿಮಾಡಿ ನಿಶ್ಚಯವಾಗಿಯೂ ಹಿಂತಿರುಗಿ ಬರುತ್ತೇನೆ. ಅದಕ್ಕೆ ಆತ್ಯಾವಶ್ಯಕವಾದ ಪ್ರತಿಜ್ಞೆಗಳನ್ನು ಮಾಡುತ್ತೇನೆ. ಕೇಳುವವನಾಗು.

**ಸತ್ಯಮೂಲಂ ಜಗತ್ಸರ್ವಂ ಲೋಕಾಃ ಸತ್ಯೇ ಪ್ರತಿಷ್ಠಿತಃ ।**
**ನಾಹಂ ಮಿಥ್ಯಾ ಪ್ರವಕ್ಷ್ಯಾಮಿ ಸತ್ಯಮೇವ ಮದಮ್ಯಹಂ ॥ ॥ 32 ॥**

ಸತ್ಯದಿಂದಲೇ ಈ ಲೋಕವು ಏರ್ಪಟ್ಟಿದೆ. ಸತ್ಯದಲ್ಲೇ ಲೋಕವು ನೆಲೆಗೊಂಡಿದೆ. ಆದ್ದರಿಂದ ನಾನು ಒಂದು ಕಾಲಕ್ಕೂ ಅಸತ್ಯವನ್ನು ಆಡುವವನಲ್ಲ. ಸತ್ಯವನ್ನೇ ಹೇಳುತ್ತೇನೆ.

ಆದ್ಯಮೇ ಸಮಯಸ್ತತ್ರ ಬ್ರಹ್ಮರಾಕ್ಷಸ ತಂ ಶೃಣು ।
ಶಪಾಮಿ ಸತ್ಯೇನ ಗತೋ ಯದ್ಯಹಂ ನಾಗಮೇ ಪುನಃ ॥ 33 ॥

ಎಲೈ ಬ್ರಹ್ಮ ರಾಕ್ಷಸನೇ, ಯಾವೊಬ್ಬನು ಸರ್ವಕಾರಣವಾದ ಸತ್ಯವನ್ನು ಕೈ ಬಿಡುತ್ತಾನೋ ಅಂತಹನಿಗೆ ಏರ್ಪಡುವ ಪಾಪವು ನಾನು ಹಿಂದಿರುಗದಿದ್ದಲ್ಲಿ ನನಗೆ ಏರ್ಪಡಲಿ.

ಯೋಗಚ್ಛೇತ್ ಪರದಾರಾಂಶ್ಚ ಕಾಮಮೋಹ ಪ್ರಪೀಡಿತಃ ।
ತಸ್ಯ ಪಾಪೇನ ಲಿಪ್ಯೇಯಂ ಯದ್ಯಹಂ ನಾಗಮೇ ಪುನಃ ॥ 34 ॥

ಮನ್ಮಥನಿಂದ ಪೀಡಿಸಲ್ಪಟ್ಟು, ಮತ್ತೊಬ್ಬರ ಪತ್ನಿಯನ್ನು ಅಪೇಕ್ಷಿಸುವವನ ಪಾಪವು ನಾನು ಹಿಂತಿರುಗದಿದ್ದಲ್ಲಿ ನನಗೆ ಬರಲಿ

ಪಾಕಭೇದಂತ್ರಯಃ ತುರ್ಯಾದಾತ್ಮನಶ್ಚೋಪಭುಂಜತಃ ।
ತಸ್ಯಪಾಪೇನ ಲಿಪ್ಯೇಯಂ ಯದ್ಯಹಂ ನಾಗಮೇ ಪುನಃ ॥ 35 ॥

ನಾನು ಮರಳಿ ಬಾರದಿದ್ದಲ್ಲಿ ಸಹ ಭೋಜನ ಮಾಡುವವರಲ್ಲಿ ಪಾಕಭೇದ ಮಾಡುವವನಿಗೆ ಏರ್ಪಡುವ ಪಾಪವು ಬರಲಿ.

ದತ್ವಾವೈ ಭೂಮಿದಾನಂ ತು ಪುನರಾಚ್ಛಿಂದತೀಹ ಯಃ ।
ತಸ್ಯಪಾಪೇನ ಲಿಪ್ಯೇಯಂ ಯದ್ಯಹಂ ನಾಗಮೇ ಪುನಃ ॥ 36 ॥

ಬ್ರಾಹ್ಮಣನೊಬ್ಬನಿಗೆ ಕೊಟ್ಟ ಭೂಮಿಧಾನವನ್ನು ಯಾವನೊಬ್ಬನು ಮತ್ತೆ ಕಿತ್ತುಕೊಳ್ಳುತ್ತಾನೋ ನಾನು ಮರಳಿ ಬಾರದಿದ್ದಲ್ಲಿ ಆ ಪಾಪವು ನನಗೆ ಬರಲಿ.

ಸ್ತ್ರಿಯಂ ಭುಕ್ತ್ವಾ ರೂಪವತೀ ಪುನರ್‌ಯಸ್ತಾಂ ವಿನಿಂದ್ಯತಿ ।
ತಸ್ಯ ಪಾಪೇನ ಲಿಪ್ಯೇಯಂ ಯದ್ಯಹಂ ನಾಗಮೇ ಪುನಃ ॥ 37॥

ಸುಂದರಿಯಾದಸ್ತ್ರೀಯನ್ನು ಯೌವನ ಕಾಲದಲ್ಲಿ ಚೆನ್ನಾಗಿ ಅನುಭವಿಸಿ, ಅನಂತರ ಅವಳಿಗೆ ದೋಷಾರೋಪಣೆಯನ್ನು ಮಾಡಿ ನಿಂದಿಸಿ ಕೈ ಬಿಡುವವನಿಗೆ ಬರುವಪಾಪವು, ನಾನು ಹಿಂತಿರುಗಿ ಬಾರದಿದ್ದಲ್ಲಿ ನನಗೆ ಬರಲಿ.

ಯೋ ಅಮಾವಾಸ್ಯಾಂ ವಿಶಾಲಾಕ್ಷೀ ಶ್ರಾದ್ಧಂ ಕೃತ್ವಾಸ್ತ್ರಿಯಂ ವ್ರಜೇತ।
ತಸ್ಯಪಾಪೇನ ಲಿಪ್ಯೇಯಂ ಯದ್ಯಹಂ ನಾಗಮೇ ಪುನಃ ॥ 38 ॥

ಅಮಾವಾಸ್ಯೆಯಂದು ಪಿತೃ ಶಾದ್ರ್ಧವನ್ನು ಮಾಡಿ, ಸ್ತ್ರೀಗಮನ ಮಾಡಿದವನಿಗೆ ಬರುವ ಪಾಪವು ನಾನು ತಿರುಗಿ ಬಾರದಿದ್ದಲ್ಲಿ ನನಗೆ ಏರ್ಪಡಲಿ.

ಭುಕ್ತ್ವಾ ಪರಸ್ಯ ಚಾನ್ನಾನಿ ಯಸ್ತಂ ನಿಂದತಿ ನಿರ್ಘೃಣಃ ।
ತಸ್ಯ ಪಾಪೇನ ಲಿಪ್ಯೇಯಂ ಯದ್ಯಹಂ ನಾಗಮೇ ಪುನಃ ॥ 39॥

ಪರರ ಅನ್ನವನ್ನು ಚೆನ್ನಾಗಿ ತಿಂದು, ಸ್ವಲ್ಪವೂ ಕೃತಜ್ಞತೆಯಿಲ್ಲದೇ ಅವನನ್ನೇ ನಿಂದಿಸುವವಿಗೆ ಬರುವ ಪಾಪವು ನಾನು ತಿರುಗಿ ಬರದಿದ್ದಲ್ಲಿ ನನಗೆ ಬರಲಿ.

ಯಸ್ತು ಕನ್ಯಾಂ ದದಾಮೀತಿ ಪುನಃಸ್ತಾಂ ನ ಪ್ರಯಚ್ಛತಿ ।
ತಸ್ಯ ಪಾಪೇನ ಲಿಪ್ಯೇಯಂ ಯದ್ಯಹಂ ನಾಗಮೇ ಪುನಃ ॥ 40॥

ಕನ್ಯೆಯನ್ನು ಕೋಡುತ್ತೇನೆಂದು ವಚನವನ್ನಿತ್ತು, ಕೊಡದೆ ಇದ್ದಲ್ಲಿ ಬರುವ ಪಾಪವು ನಾನು ತಿರುಗಿ ಬಾರದಿದದ್ದಲ್ಲಿ ನನಗೆ ಬರಲಿ.

ಷಷ್ಠ್ಯಷ್ಟಮ್ಯೋರಮಾವಾಸ್ಯ ಚತುರ್ದಶ್ಯೋಶ್ಚ ನಿತ್ಯಶಃ ।
ಅಸ್ನಾತಾನಾಂಗತಿಂ ಗಚ್ಛೇತ್ ಯದ್ಯಹಂ ನಾಗಮೇ ಪುನಃ ॥ 41 ॥

ಷಷ್ಠಿ, ಅಷ್ಟಮಿ, ಅಮಾವಾಸ್ಯೆ, ಚತರ್ದಶಿ ದಿನಗಳಂದು ಸ್ನಾನವಿಲ್ಲದೇ ಭುಜಿಸುವವನಿಗೆ ಬರುವ ದುರ್ಗತಿಯು ನಾನು ಮರಳಿ ಬರದಿದ್ದಲ್ಲಿ ನನಗೆ ಬರಲಿ.

ದ್ಯಾಸ್ಯಾಮೀತಿ ಪ್ರತಿಶ್ರುತ್ಯ ನ ಚ ಯಸ್ಯ ಪ್ರಯಚ್ಛತಿ ।
ಗತಿಂ ತಸ್ಯ ಪ್ರಪದ್ಯೇಯೈ ಯದ್ಯಹಂ ನಾಗಮೇ ಪುನಃ ॥ 42 ॥

ಒಬ್ಬನಿಗೆ ಒಂದು ವಸ್ತುವನ್ನು ಕೊಡುತ್ತೇನೆಂದು ವಚನವನಿತ್ತು, ಅದನ್ನು ನೀಡದೇ ಇದ್ದವನಿಗೆ ಬರುವ ಗತಿಯನ್ನು ನಾನು ಮರಳಿ ಬಾರದಿದ್ದಲ್ಲಿ ನಾನು ಹೊಂದುವಂತಾಗಲಿ.

ಮಿತ್ರಭಾರ್ಯಾಂತು ಯೋ ಗಚ್ಛೇತ್ ಕಾಮಬಾಣವಶಾನುಗಃ ।
ತಸ್ಯ ಪಾಪೇನ ಲಿಪ್ಯೇಯಂ ಯದ್ಯಹಂ ನಾಗಮೇ ಪುನಃ ॥ 43॥

'ಮಿತಾತ್ ತ್ರಾಯತ ಇತಿ ಮಿತ್ರಃ'--ಅಪತ್ತಿನಿಂದ ಕಾಪಾಡುವವನು ಮಿತ್ರ' ಹೀಗೆ ಮಹೋಪಕಾರಕನಾದ ಮಿತ್ರನಪತ್ನಿಯನ್ನು ಕಾಮವಾಸನೆಯಿಂದ ಯಾವನು ಆಸೆಪಡುತ್ತಾನೋ ಅವನಿಗೆ ಬರುವ ಪಾಪವು ನನ್ನನ್ನು ಆವರಿಸಲಿ.

ಗುರುಪತ್ನೀಂ ರಾಜಪತ್ನೀಂ ಯೇ ತು ಗಚ್ಛಂತಿ ಮೋಹಿತಃ ।
ತೇಷಾಂ ಗತಿಂ ಪ್ರಪದ್ಯೇ ವೈ ಯದ್ಯಹಂ ನಾಗಮೇ ಪುನಃ ॥ 44 ॥

ಆಮುಷ್ಮಿಕ ಪ್ರದಾತಾವಾದ ಗುರುವಿನ ಪತ್ನಿಯನ್ನು , ಐಹಿಕ ಪ್ರದಾತಾವಾದ ರಾಜನ ಪತ್ನಿಯನ್ನೂ, ಮೋಹವಶನಾಗಿ ಯಾವನು ಅನುಭವಿಸುತ್ತಾನೋ ಅವನಿಗೆ ಬರುವ ಪಾಪವು ತಿರುಗಿ ಬಾರದಿದ್ದಲ್ಲಿ ನನಗೆ ಬರಲಿ.

ಯೋವೈ ದಾರದ್ವಯವ್ ಕೃತ್ವಾ ಏಕಸ್ಯ ಪ್ರೀತಿಮಾನ್ ಭವೇತ್ ।
ಗತಿಂ ತಸ್ಯ ಪ್ರಪದ್ಯೇ ವೈ ಯದ್ಯಹಂ ನಾಗಮೇ ಪುನಃ ॥ 45 ॥

ಯಾವನೊಬ್ಬನು ಇಬ್ಬರು ಸ್ತ್ರೀಯರನ್ನು ವಿವಾಹವಾಗಿ, ಒಬ್ಬಳನ್ನು ಉಪೇಕ್ಷಿಸಿ ಮತ್ತೊಬ್ಬಳನ್ನು ಮಾತ್ರ ಅತಿಶಯವಾಗಿ ಪ್ರೀತಿಸುತ್ತಾನೋ, ಅವನಿಗೆ ಬರುವ ಪಾಪವು ನಾನು ಮರಳಿ ಬಾರದಿದ್ದಲ್ಲಿ ನನಗೆ ಬರಲಿ,

ಅನನ್ಯಶರಣಾಮ್ ಭಾರ್ಯಾಂ ಯೌವ್ವನೇ ಯಃ ಪರಿತ್ಯಜೇತ್ ।
ತಸ್ಯ ಪಾಪೇನ ಲಿಪ್ಯೇಯಂ ಯದ್ಯಹಂ ನಾಗಮೇ ಪುನಃ ॥ 46 ॥

ಯಾವನು ಅನನ್ಯಗತಿಕಳಾಗಿಯೂ, ಪತಿವ್ರತೆಯಾಗಿಯೂ ಇರುವ ಪತ್ನಿಯನ್ನು ಯೌವ್ವನದಲ್ಲಿ ತ್ಯಜಿಸುತ್ತಾನೋ, ಅಂತಹವನಿಗೆ ಬರುವ ಪಾಪವು ನಾನು ಹಿಂತಿರುಗದಿದ್ದಲ್ಲಿ ನನಗೆ ಬರಲಿ.

ಗೋಕುಲಸ್ಯ ತೃಷಾರ್ತಸ್ಯ ಜಲಾರ್ಥಮಭಿಧಾವತಃ ।
ವಿಘ್ನ ಮಾಚರತೇ ಯಸ್ತು ತತ್ಪಾಪಂ ಸ್ಯಾದನಾಗಮೇ ॥ 47 ॥

ಅತ್ಯಂತ ದಾಹದಿಂದ ನೀರನ್ನರಸುತ್ತಾ ಓಡಿಬರುವ ಹಸುಗಳನ್ನು ಜಲಪಾನ ಮಾಡದಂತೆ ಯಾವನು ವಿಘ್ನವುಂಟುಮಾಡುತ್ತಾನೋ ಅವನಿಗೆ ಬರುವಂತಹ ಪಾಪವು ನಾನು ಹಿಂತಿರುಗದಿದ್ದಲ್ಲಿ ನನಗೆ ಬರಲಿ.

ಬ್ರಹ್ಮಘ್ನೇ ಚ ಸುರಾಪೇಚ ಚೋರೇ ಭಗ್ನವ್ರತೇ ತಥಾ ।
ಯಾಗತಿ ರ್ವಿಹಿತಾ ಸದ್ಭಿಃ ತತ್ಪಾಪಂ ಸ್ಯಾದನಾಗಮೇ ॥ 48 ॥

ಯಾವನು ಬ್ರಹ್ಮಹತ್ಯೆ ಮಾಡುತ್ತಾನೋ, ಯಾವನು ಮದ್ಯಪಾನ ಮಾಡುತ್ತಾನೋ, ಯಾವನು ಬಂಗಾರವನ್ನು ಕದಿಯುತ್ತಾನೋ, ಯಾವನು ವ್ರತಭಂಗ ಮಾಡುತ್ತಾನೋ, ಈ ರೀತಿಯಾದ ಮಹಾಪಾತಕಗಳನ್ನು ಮಾಡುವವರಿಗೆ ಸತ್ಪುರುಷರು ಯಾವ ದುರ್ಗತಿ ಏರ್ಪಡುವುದೆಂದು

ಹೇಳುತ್ತಾರೋ ನಾನು ಹಿಂತಿರುಗದಿದ್ದಲ್ಲಿ ಅಂತಹ ಗತಿ ನನಗೆ ಬರಲಿ.

ವಾಸುದೇವಂ ಪರಿತ್ಯಜ್ಯ ಯೇನ್ಯಂ ದೇವಮುಪಾಸತೇ ।
ತೇಷಾಂ ಗತಿಂ ಪ್ರಪದ್ಯೇಯೈ ಯದ್ಯಹಂ ನಾಗಮೇ ಪುನಃ ॥ 49 ॥

ಆಶ್ರಿತ ಸುಲಭನಾಗಿ ಸರ್ವವ್ಯಾಪಿಯಾದ, ಶ್ರೀ ವಾಸುದೇವನನ್ನು ಪೂಜಿಸದೆ ಇತರ ದೇವತೆಗಳನ್ನು ಯಾರು ಪೂಜೆ ಮಾಡುತ್ತಾರೋ ಅಂತಹವರು ಹೊಂದುವ ದುರ್ಗತಿಯನ್ನು ತಿರುಗಿ ಬಾರದಿದ್ದಲ್ಲಿ ನಾನು ಹೊಂದುತ್ತೇನೆ.

ನಾರಾಯಣಮಥಾನ್ಯೈಸ್ತು ದೇವಸ್ತುಲ್ಯಂ ಕರೋತಿಯಃ ।
ತಸ್ಯಪಾಪೇನ ಲಿಪ್ಯೇಯಂ ಯದ್ಯಹಂ ನಾಗಮೇ ಪುನಃ ॥ 50 ॥

ಸರ್ವಸ್ಮಾತ್ ಪರನಾಗಿ , ಸರ್ವಾಂತರಯಾಮಿಯಾಗಿ, ಸರ್ವಕರ್ಮ ಸಮಾರಾಧ್ಯನಾಗಿ, ಮುಮುಕ್ಷುಗಳಿಗೆ ಉಪಾಸ್ಯನಾಗಿ , ಮೋಕ್ಷಪ್ರದನಾಗಿ, ಮುಕ್ತಿಪ್ರಾಪ್ಯನಾದ ಸರ್ವೇಶ್ವರನನ್ನೂ—

''ಕಾಣೆಲುಂ ಉರುಪ್ಪೊಲಾರ್ ಶೆವಿಕ್ಕಿನಾದ ಕೀರ್ತಿಯಾರ್ ಪೇಣೆಲುಂ ವರಂತರುಂ ಮಿಡುಕ್ಕಿಲಾದ ದೇವರ್'' ಎಂಬಂತಹ ಕರ್ಮ ಪರವಶರಾದ ವ್ಯತಿರಿಕ್ತ ದೇವತೆಗಳನ್ನೂ ಸಮನಾಗಿ ಯಾವನು ಭಾವಿಸುತ್ತಾನೋ, ಅಂತಹವನಂತೆಯೇ ನಿತ್ಯ ಸಂಸಾರಿಯಾಗುತ್ತೇನೆ ಹಿಂತಿರುಗಿ ನಾನು ಬಾರದಿದ್ದಲ್ಲಿ.

ಚಂಡಾಲವಚನಂ ಶ್ರುತ್ವಾ ಪರಿತುಷ್ಟಸ್ತು ರಾಕ್ಷಸಃ ।
ಉವಾಚ ಮಧುರಂ ವಾಕ್ಯಂ ಗಚ್ಛ ಶೀಘ್ರಂ ನಮೋಸ್ತು ತೇ ॥ 51 ॥

ಹೀಗೆ ಪ್ರತಿಜ್ಞೆ ಮಾಡಿದ 'ನಂಪಾಡುವಾನನ್ನು' ನೋಡಿ ಬ್ರಹ್ಮರಾಕ್ಷಸನು ಸಂತುಷ್ಟನಾಗಿ ಶೀಘ್ರವಾಗಿ ಹೋಗಿ ಬಾ ಎಂದು ಹೇಳಿ ನಮಸ್ಕರಿಸಿದನು.

ನಂಪಾಡುವಾನ್ ಮಾಡಿದ ಹದಿನೇಳು ಪ್ರತಿಜ್ಞೆಗಳನ್ನು ಪ್ರಧಾನವಾಗಿ ಪರಿಗಣಿಸದ ಬ್ರಹ್ಮರಾಕ್ಷಸನು, ಈ ಹದಿನೆಂಟನೆಯ ಪ್ರತಿಜ್ಞೆಯನ್ನು ಕೇಳಿದೊಡನೆಯೇ ಅದಕ್ಕೆ ತಲೆಬಾಗಲು ಕಾರಣವೇನೆಂದರೆ, ಈ ಪ್ರತಿಜ್ಞೆಯಲ್ಲಿ ಹೇಳಿದ ಪಾಪವು ಅತಿ ಘೋರವಾದ ಪಾಪವಾದದ್ದರಿಂದಲೂ, ಜೀವಾತ್ಮನನ್ನು ನಿತ್ಯ ಸಂಸಾರಿಯನ್ನಾಗಿ ಮಾಡುವಂತಹದ್ದಾರಿಂದಲೂ ಅದನ್ನು ಕೇಳಿದ ತಕ್ಷಣವೇ ನಂಪಾಡುವವನ್ನು ನಂಬಿ ಹೋಗಲು ಅನುಮತಿಸಿದನು.

ಇದರಿಂದ ಏರ್ಪಡುವ ಸದರ್ಥವೇನೆಂದರೆ, ಪಾಪಗಳಲ್ಲೆಲ್ಲಾ ಅತ್ಯಂತ ಕ್ರೂರವಾದ ಪಾಪವೆಂದರೆ ''ಶ್ರೀಮನ್ನಾರಾಯಣನನ್ನು ಮತ್ತು ಇತರ ದೇವತೆಗಳನ್ನು ಸಮನಾಗಿ ಭಾವಿಸುವುದು '' --ಎಂಬುದಾಗಿದೆ. ಜ್ಞಾನಿಗಳು ಇಂತಹ ಮಹಾಪಾತಕವನ್ನು ಸಮೂಲವಾಗಿ ಬಿಡಬೇಕೆಂಬುದೇ ಈ ಪುರಾಣದ ಸಾರಾರ್ಥವಾಗಿದೆ.

ರಾಕ್ಷಸೇನ ವಿನಿರ್ಮುಕ್ತಶ್ಚಂಡಾಲಃ ಕೃತನಿಶ್ಚಯಃ ॥
ಪುನರ್ಗಾಯತಿ ಮಹ್ಯಂ ವೈ ಮಮ ಭಕ್ತ್ಯಾವ್ಯವಸ್ಥಿತಃ ॥ 52 ॥

ರಾಕ್ಷಸನಿಂದ ಬಿಡಲ್ಪಟ್ಟ ನಂಪಾಡುವಾನ್, ಸಂಸಾರ ಸಂಬಂಧದಿಂದ ಬಿಡುಗಡೆಯನ್ನು ಪಡೆದ ಮುಕ್ತನಂತೆ, ಬಂದು ಮುನ್ನಿನಂತೆಯೇ ನನ್ನನ್ನು ಗಾನಮಾಡಲು ತೊಡಗಿದ.

ಅಥ ಪ್ರಭಾತೇ ವಿಮಲೇ ವಿನಿವೃತ್ತೇತು ಜಾಗರೇ ।
ನಮೋ ನಾರಾಯಣೇತ್ಯುಕ್ತ್ವಾ ಶ್ವಪಾಕಃ ಪುನರಾಗಮತ್ ॥ 53 ॥

ಅನಂತರ ಬೆಳಗಾದ ಮೇಲೆ ಜಾಗರ ವ್ರತವನ್ನು ಸಮಾಪನಮಾಡಿ, ನನ್ನಲ್ಲಿ ಆತ್ಮಸಮರ್ಪಣವನ್ನು ಮಾಡಿ ತನಗೆ ತ್ಯಾಜ್ಯವಾದ ಈ ಪಾಂಚಭೌತಿಕ ಶರೀರವನ್ನು ತ್ಯಜಿಸುವ ಆಸೆಯಿಂದ ಬ್ರಹ್ಮರಾಕ್ಷಸನ ಬಳಿಗೆ ಮರಳಿದನು.

ಗಚ್ಛತಸ್ತ್ವರಿತಂ ತಸ್ಯಪುರುಷಃ ಪುರತಸ್ಥಿತಃ ।
ಉವಾಚ ಮಧುರಂ ವಾಕ್ಯಂ ಶ್ವಪಾಕಂ ತದನಂತರಂ ॥ 54 ॥

ನಂಪಾಡುವಾನ್ ನನ್ನನ್ನು ಹಾಡುವುದಕ್ಕೆ ಬರುವ ವೇಗಕ್ಕಿಂತ ಎರಡರಷ್ಟು ವೇಗವಾಗಿ ರಾಕ್ಷಸನ ಬಳಿಗೆ ಹಿಂತಿರುಗಿದನು. ಹೀಗೆ ಹೋಗುತ್ತಿರುವ ಅವನ ಮುಂದೆ ಒಂದು ಪುರುಷಾಕಾರವು ಬಂದು ನಿಂತಿತು. ನಂಪಾಡುವಾನನ್ನು ನೋಡಿ ಮೃದುವಾಗಿ ಮಾತನಾಡಿತು.

ಕುತೋಗಚ್ಛಸಿ ಚಂಡಾಲ ದ್ರುತಂ ಗಮನ ನಿಶ್ಚಿತಂ ।
ಏತದಾಚಕ್ಷ್ವ ತತ್ತ್ವೇನ ಯತ್ರತೇ ವರ್ತತೇ ಮನಃ ॥ 55 ॥

ನಿನ್ನ ನಡಿಗೆ ವೇಗವನ್ನು ನೋಡಿದರೆ ಆಶ್ಚರ್ಯವಾಗುತ್ತಿದೆ. ಇಷ್ಟೊಂದು ವೇಗದಿಂದ ಎಲ್ಲಿಗೆ ಹೋಗುತ್ತಿರುವ ? ಸತ್ಯವಾಗಿಯೂ ನನಗೆ ಇದನ್ನು ಹೇಳಲೇಬೇಕು.

ತಸ್ಯತದ್ ವಚನಂ ಶ್ರುತ್ವಾ ಶ್ವಪಾಕಃ ಸತ್ಯ ಸಮ್ಮತಃ ।
ಉವಾಚ ಮಧುರಂ ವಾಕ್ಯಂ ಪುರುಷಂ ತದನಂತರಂ ॥ 56 ॥

ಸತ್ಯಪ್ರತಿಜ್ಞನಾದ ನಂಪಾಡುವಾನ್ ಆ ಪುರುಷನ ಮಾತುಗಳನ್ನು ಕೇಳಿ ಅವನಿಗೆ ಹೀಗೆ ಉತ್ತರಿಸಿದನು.

ಸಮಯೋಮೇ ಕೃತೋಽಯತ್ರ ಬ್ರಹ್ಮರಾಕ್ಷಸ ಸನ್ನಿಧೌ ।
ತತ್ರಾಹಂ ಗಂತುಮಿಚ್ಛಾಮಿ ಯತ್ರಾಸೌ ಬ್ರಹ್ಮರಾಕ್ಷಸಂ ॥ 57 ॥

ಬ್ರಹ್ಮರಾಕ್ಷಸನಿಗೆ ಪ್ರತಿಜ್ಞಾ ವಚನವನ್ನು ಕೊಟ್ಟು ಬಂದಿದ್ದೇನೆ. ಆ ಪ್ರತಿಜ್ಞೆಯು ತಪ್ಪದಂತೆ ಬ್ರಹ್ಮರಾಕ್ಷಸನಿರುವ ಸ್ಥಳಕ್ಕೆ ಶೀಘ್ರವಾಗಿ ಹೋಗಬೇಕು. ಆದರೆ ಮೊದಲ್ಲಿದ್ದ ಸ್ಥಳದಲ್ಲಿ ಅವನೀಗೆ ಕಾಣುತ್ತಿಲ್ಲ, ಅದ್ದರಿಂದ ಅವನನ್ನು ಅರಸುತ್ತಾ ಹೊರಟಿದ್ದೇನೆ.

ಶ್ವಪಾಕ ವಚನಂ ಶ್ರುತ್ವಾ ಪುರುಷೋ ಭಾವಶೋಧಕಃ ।
ಉವಾಚ ಮಧುರಂ ವಾಕ್ಯಂ ಶ್ವಪಾಕಂ ತದನಂತರಂ ॥ 58 ॥

ನಂಪಾಡುವಾನನ ಮಾತನ್ನು ಕೇಳಿ ಅವನ ಅಂತರಂಗವನ್ನು ಶೋಧಿಸುವ ಇಚ್ಚೆಯಿಂದ ಆ ಪುರುಷನು ಹೀಗೆ ಹೇಳಿದನು.

ನ ತತ್ರಗಚ್ಛ ಚಂಡಾಲ ಮಾರ್ಗೇಣ್ಯಾನೇನ ಸುವ್ರತ ।
ತತ್ರಾಸೌ ರಾಕ್ಷಸಃ ಪಾಪಃ ಪಿಶಿತಾಶೀ ದುರಾಸದಃ ॥ ॥ 59 ॥

ಜಾತಿಯಿಂದ ರಾಕ್ಷಸನಾಗಿ, ಅದರಲ್ಲಿಯೂ ವಿಭೀಷಣನಂತೆ ಧರ್ಮಾತ್ಮನಲ್ಲದೆ, ಪಾಪಿಷ್ಠನಾಗಿ, ಮಾಂಸ ಭಕ್ಷಕನಾಗಿ, ಕೊಲೆಗಾರನಾದ, ಅವನಿಂದ ತಪ್ಪಿಸಿಕೊಳ್ಳದೆ ಅಲ್ಲಿಗೆ ಹೋಗುವುದು ಉಚಿತವೇ ಎಂದು ಕೇಳಿದನು.

ಪುರುಷಸ್ಯ ವಚನಂ ಶ್ರುತ್ವಾ ಶ್ವಪಾಕಃ ಸತ್ಯ ಸಂಗರಃ ।
ಮರಣಂ ತತ್ರ ನಿಶ್ಚಿತ್ಯ ಮಧುರಂ ವಾಕ್ಯಮಬ್ರವೀತ್ ॥ ॥ 60 ॥

ಆ ಪುರುಷನ ಮಾತುಗಳನ್ನು ಕೇಳಿ, ಸತ್ಯವಾದಿಯಾದ ನಂಪಾಡುವಾನ್ ಸತ್ಯವನ್ನು ಬಿಡುವುದಕ್ಕಿಂತ ಪ್ರಾಣವನ್ನು ಬಿಡುವುದೇ ಶ್ರೇಷ್ಠವಾದುದು ಎಂದು ನಿಶ್ಚಯದಿಂದ ಹೇಳಿದನು.

ನಾಹಮೇವಂ ಕರಿಷ್ಯಾಮಿ ಯನ್ಮಾಂತ್ವಂ ಪರಿಪೃಚ್ಛಸಿ।
ಅಹಂ ಸತ್ಯೇಪ್ರವೃತೋೀತ್ತೈ ಶೀಲಂ ಸತ್ಯೇ ಪ್ರತಿಷ್ಠಿತಂ॥ ॥61॥

ಎಲೈ ಪುರುಷನೇ ನೀನು ಹೇಳಿದಂತೆ ನಾನು ಮಾಡಲಾರೆ. ನಾನೆಂದೂ ಸತ್ಯಕ್ಕೆ ತಪ್ಪುವವನಲ್ಲ. ನಾನು ಸತ್ಯಕ್ಕೆ ತಪ್ಪಿದರೂ ನನ್ನ ಸ್ವಭಾವವು ಅದನ್ನು ತಪ್ಪುವುದಿಲ್ಲ.

ತತಸ್ಸ ಪದ್ಮಪತ್ರಾಕ್ಷಃ ಶ್ವಪಾಕಂ ಪ್ರತ್ಯುವಾಚ ಹ।
ಯದ್ಯೇವಂ ನಿಶ್ಚಯಸ್ತಾತ ಸ್ವಸ್ತಿತೇಸ್ತು ಗಮಿಷ್ಯತಃ॥ ॥62॥

ಹೀಗೆ ಹೇಳುವ ನಂಪಾಡುವಾನನ್ನು ನೋಡಿ ಆ ಪುರುಷನು ಇವನು ಪ್ರಾಣವನ್ನು ಬಿಟ್ಟಾದರೂ ಸತ್ಯವನ್ನು ರಕ್ಷಿಸುವವನು ಎಂದು ನಿಶ್ಚಯಿಸಿ ''ಅಮಲಂಗಳಾಹವಿಳಿಕ್ಕುಂ'' ಎಂಬಂತೆ ಬ್ರಹರಾಕ್ಷಸನ ಅಪತ್ತು, ನಂಪಾಡುವಾನನ ಅಪತ್ತು ಎರಡೂ ನೀಗುವಂತೆ ಮಂಗಳಕರವಾದ ಪೂರ್ಣ ಕಟಾಕ್ಷವನ್ನು ಮಾಡಿ ನಿನಗೆ ಮಂಗಳವಾಗಲಿ ಹೋಗಿ ಬಾ ಎಂದು ಅನುಮತಿಸಿದನು.

ಆ ಪುರುಷನು ಬೇರೆ ಯಾರೂ ಅಲ್ಲ ''ಮಹಾವರಾಹಃ ಸ್ಫುಟಪದ್ಮಲೋಚನಃ'' ಎಂದೂ ''ಪುರುಷಃ ಪುಷ್ಕರೇಕ್ಷಣಃ'' ಎಂದೂ ಹೇಳುವಂತೆ ಆತ ಸಾಕ್ಷಾತ್ ಪರಮಾತ್ಮನಲ್ಲದೇ ಬೇರೆ ಅಲ್ಲ: ಎಂಬುದು ಪೂರ್ವಾಚಾರ್ಯರ ಅಭಿಪ್ರಾಯ.

ಬ್ರಹ್ಮರಕ್ಷೋಂತಿಕಂ ಪ್ರಾಪ್ಯ ಸತ್ಯೇಸೌ ಕೃತನಿಶ್ಚಯಃ।
ಉವಾಚ ಮಧುರಂ ವಾಕ್ಯಂ ರಾಕ್ಷಸಂ ಪಿಶಿತಾಶನಂ॥ ॥63॥

ಆ ಪುರುಷನಿಂದ ಬೀಳ್ಕೊಂಡು ನಂಪಾಡುವಾನ್ ಆ ಬ್ರಹ್ಮರಾಕ್ಷಸನನ್ನು ಅರಸುತ್ತಾ ಬಂದು ಅವನನ್ನು ಕಂಡು ಹೀಗೆ ಹೇಳಿದನು.

ಭವತಾ ಸಮನುಜ್ಞಾತೋ ಗಾನಂ ಕೃತ್ವಾ ಯಥೇಪ್ಸಯಾ।
ವಿಷ್ಣವೇ ಲೋಕನಾಥಾಯ ಮಮ ಪೂರ್ಣೋ ಮನೋರಥಃ
ಏತಾನಿ ಮಮಚಾಂಗಾನಿ ಭಕ್ಷಯಸ್ವ ಯಥೇಚ್ಛಯಾ। ॥64॥

ಎಲ್ಲೈ ಬ್ರಹ್ಮ ರಾಕ್ಷಸನೆ! ನೀನು ಅನುಜ್ಞೆ ಮಾಡಿದಂತೆಯೇ ನಾನು ಹೋಗಿ ಬಂದಿದ್ದೇನೆ. ಮನಸೋಇಚ್ಛೆ ಸರ್ವೇಶ್ವರನಾದ ''ಅಳಹಿಯ ನಂಬಿಯನ್ನು'' ತೃಪ್ತಿಪಡಿಸಿ ಪೂರ್ಣ ಮನೋರಥನಾಗಿದ್ದೇನೆ, ನೀನೂ ಕೂಡ ನನ್ನ ಶರೀರದ ರಕ್ತ ಮಾಂಸಗಳನ್ನು ಭುಜಿಸಿ ಪೂರ್ಣಮನೋರಥನಾಗು.

ಶ್ವಪಾಕ ವಚನಂ ಶುತ್ವಾ ಬ್ರಹ್ಮರಾಕ್ಷೋಭಯಾನಕಃ ।
ಉವಾಚ ಮಧುರಂ ವಾಕ್ಯಂ ಶ್ವಪಾಕಂ ಸಂಶ್ರಿತ ವ್ರತಂ ॥ ॥ 65 ॥

ಅತ್ಯಂತ ಭಯಂಕರನಾದ ಆ ಬ್ರಹ್ಮರಾಕ್ಷಸನಾದರೋ ನಂಪಾಡುವಾ ನನ ಈ ಮಾತನ್ನು ಕೇಳಿ ಹೀಗೆ ಹೇಳಿದನು.

ತ್ವಮದ್ಯ ರಾತ್ರೌ ಚಂಡಾಲ ವಿಷ್ಣೋರ್ಜಾಗರಣಂ ಪ್ರತಿ ।
ಫಲಂಗೀತಸ್ಯ ಮೇ ದೇಹಿ ಜೀವಿಂತಂ ಯದಿಚೇಚ್ಛಸಿ ॥

ಎಲೈ ಮಹಾನುಭಾವನೇ ಪ್ರಾಣತ್ಯಾಗ ಮಾಡಲು ಬಂದ ನೀನು, ಪ್ರಾಣವನ್ನು ಉಳಿಸಿಕೊಂಡು ಹೋಗುವ ಇಚ್ಛೆಯಿದ್ದಲ್ಲಿ ಈ ದಿನ ರಾತ್ರಿ, ಸರ್ವೇಶ್ವರನನ್ನು ಗಾನ ಮಾಡಿದ ಫಲವನ್ನು ನನಗೆ ನೀಡಬೇಕು ಎಂದು ಕೇಳಿದನು,

ಬ್ರಹ್ಮರಕ್ಷೋ ವಚ ಶ್ರುತ್ವಾ ಶ್ವಪಾಕಃ ಪುನರಬ್ರವೀತ್ ॥
ಇದನ್ನು ಕೇಳಿ ನಂಪಾಡುವಾನ್ ಹೀಗೆ ಪ್ರತಿನುಡಿದನು ॥ 67 ॥

ಯತ್ವಯಾ ಭಾಷಿತಂ ಪೂರ್ವಂ ಮಯಾ ಸತ್ಯಂಚ ಯತ್ ಕೃತಂ ।
ಭಕ್ಷಯಸ್ವ ಯಥೇಚ್ಛಮಾಂ ದದ್ಯಾಂ ಗೀತ ಫಲಂ ನತು ॥ ॥ 68 ॥

ನೀನು ಮೊದಲು ಹೇಳಿದಂತೆಯೇ ನಾನು ಮಾತಿಗೆ ತಪ್ಪದೇ ನಿನ್ನ ಬಳಿಗೆ ಬಂದಿದ್ದೇನೆ. ಅದೇ ರೀತಿ ನೀನೂ ಕೂಡ ನನ್ನ ಶರೀರವನ್ನು ಭಕ್ಷಿಸು. ಆದರೆ ನಾನು ನನ್ನ ಗೀತ ಫಲವನ್ನು ಮಾತ್ರ ನಿನಗೆ ಕೊಡಲಾರೆ ಎಂದನು.

ಚಂಡಾಲಸ್ಯ ವಚಶ್ಶ್ರುತ್ವಾ ಹೇತುಯುಕ್ತಮನಂತರಂ ।
ಉವಾಚ ಮಧುರಂ ವಾಕ್ಯಂ ಚಂಡಾಲಂ ಬ್ರಹ್ಮರಾಕ್ಷಸಃ ॥ 69 ॥

ಸಕಾರಣವಾಗಿರುವ ನಂಪಾಡುವಾನನ ಮಾತುಗಳನ್ನು ಕೇಳಿದ ರಾಕ್ಷಸನು ಮಧುರವಾಗಿ ಹೀಗೆ ಹೇಳಿದನು.

ಅಥವಾ ಅರ್ಧಂತು ಮೇ ದೇಹಿ ಪುಣ್ಯಂ ಗೀತಸ್ಯ ಯತ್ಫಲಂ ।
ತತೋ ಮೋಕ್ಷ್ಯಾಮಿ ಕಲ್ಯಾಣ ಭಕ್ಷ್ಯಾದಸ್ಮಾತ್ ವಿಭೀಷಣಾತ್ ॥
॥ 70 ॥

ಗೀತ ಫಲವನ್ನು ಪೂರ್ಣವಾಗಿ ಕೊಡದಿದ್ದರೂ, ಅದರಲ್ಲಿನ ಅರ್ಧ ಭಾಗವನ್ನಾದರೂ ಕೊಡು. ಆಗ ನನ್ನ ಭಯಂಕರವಾದ ಭಕ್ಷಣದಿಂದ ನೀನು ಬಿಡುಗಡೆಯನ್ನು ಪಡೆಯಬಹುದು ಎಂದನು.

ಬ್ರಹ್ಮರಕ್ಷೋವಚಶ್ಶ್ರುತ್ವಾ ಶ್ವಪಾಕಃ ಸಂಶ್ರಿತವ್ರತಃ ।
ವಾಣೀಂ ಸಲಕ್ಷಣಾಂ ಸಮಾದಾಯ ಬ್ರಹ್ಮ ಸಮಬ್ರವೀತ್ ॥ 71 ॥

ಬ್ರಹ್ಮರಾಕ್ಷಸನ ಮಾತುಗಳನ್ನು ಕೇಳಿ ನಂಪಾಡುವಾನ್ ಹೀಗೆ ಹೇಳಿದನು.

ಭಕ್ಷಯಾಮೀತಿ ಸಂಶ್ರುತ್ಯ ಗೀತಮನ್ಯತ್ ಕಿಮಿಚ್ಛಸಿ ॥

ನನ್ನ ಶರೀರವನ್ನು ಭಕ್ಷಿಸುತ್ತೇನೆಂದು ಹೇಳಿ ಅದನ್ನು ಬಿಟ್ಟು ಈಗ ಗೀತಾರ್ಥ ಫಲವನ್ನು ಏಕೆ ಕೇಳುತ್ತಿರುವ ? ನಾನು ಅದನ್ನೂ ಕೊಡಲಾರೆ ಎಂದನು.

ಶ್ವಪಾಕಸ್ಯ ವಚನಂ ಶ್ರುತ್ವಾ ಬ್ರಹ್ಮರಕ್ಷೋ ಭಯಾವಹಂ ।
ಉವಾಚ ಮಧುರಂ ವಾಕ್ಯಂ ಶ್ವಪಾಕಂ ಸಂಶ್ರಿತವ್ರತಂ ॥ 72 ॥
ಏಕಯಾಮಸ್ಯ ಮೇ ದೇಹಿಪುಣ್ಯಂ ಗೀತಸ್ಯಯತ್ಫಲಂ ।
ತತೋ ಯಾಸ್ಯಸಿ ಕಲ್ಯಾಣ ಸಂಗಮಂ ಪುತ್ರಾದಾರಕೈಃ ॥ 73 ॥

ಕೃತಕೃತ್ಯನಾದ ಬ್ರಹ್ಮರಾಕ್ಷಸನು ನಂಪಾಡುವಾನನು ನೋಡಿ ಕೊನೆಯ ಪಕ್ಷ ಒಂದು ಯಾಮದ ಗಾನದ ಫಲವನ್ನಾದರೂ ನನಗೆ ನೀಡು. ನನ್ನಿಂದ ತಪ್ಪಿಸಿಕೊಂಡು ಹೋಗಿ ನಿನ್ನ ಪತ್ನೀ ಪುತ್ರರೊಡನೆ ಆನಂದದಿಂದರು ಎಂದನು.

ಶ್ರುತ್ವಾ ರಾಕ್ಷಸವಾಕ್ಯಾನಿ ಚಂಡಾಲೋ ಗೀತಲಾಲಸಃ ।
ಉವಾಚ ಮಧುರಂ ವಾಕ್ಯಂ ರಾಕ್ಷಸಂ ಕೃತ ನಿಶ್ಚಯಂ ॥ 74 ॥

ಈ ಮಾತುಗಳನ್ನು ಕೇಳಿ ಧೃಡವ್ರತನಾಗಿಯೂ, ಧೀರನಾಗಿಯೂ ಗಾನದಲ್ಲಿ ಅತ್ಯಾಸಕ್ತನೂ ಆದ ನಂಪಾಡುವಾನ್ ಹೀಗೆ ನುಡಿದನು.

ನ ಯಾಮಸ್ಯ ಫಲಂ ದದ್ಯಾಂ ಬ್ರಹ್ಮರಕ್ಷಸ್ ತವೇಪ್ಸಿತಂ ।
ಪಿಬಸ್ವ ಶೋಣಿತಂ ಮಹ್ಯಂ ಯತ್ವಯಾ ಪೂರ್ವ ಭಾಷಿತಂ ॥ 75 ॥

ಎಲೈ ಬ್ರಹ್ಮರಾಕ್ಷಸನೇ ಒಂದು ಯಾಮದ ಗಾನದ ಫಲವನ್ನೂ ಕೂಡ ನೀಡಲಾರೆ. ನೀನು ಮೊದಲೇ ತಿಳಿಸಿದಂತೆ ಬಂದು ನನ್ನ ರಕ್ತವನ್ನು ಹೀರು ಎಂದನು,

ಶ್ವಪಾಕಸ್ಯ ವಚನಂ ಶ್ರುತ್ವಾ ರಾಕ್ಷಸಃ ಪಿಶಿತಾಶನಃ ।
ಸತ್ಯವಂತಂ ಗುಣಜ್ಞಂಚ ಚಂಡಾಲಂ ಇದಮಬ್ರವೀತ್ ॥ 76 ॥

ಹೀಗೆ ನಂಪಾಡವಾನ್ ಹೇಳುವುದನ್ನು ಕೇಳಿ ಇವನು ಪ್ರಾಣವನ್ನೇ ಕೊಟ್ಟರೂ ಸತ್ಯವನ್ನು ತಪ್ಪುವವನಲ್ಲ. ಪ್ರಾಣಕ್ಕಿಂತಲೂ ಗಾನದ ವೈಭವವನ್ನು ಅರಿತವನಾಗಿದ್ದಾನೆ. ಇವನು ಎಲ್ಲವನ್ನೂ ಅರಿತವನು ಎಂದು ನಿಶ್ಚಯಿಸಿ ಬ್ರಹ್ಮರಾಕ್ಷಸನು ಹೀಗೆ ಹೇಳಿದನು.

ಏಕಂ ಗೀತಸ್ಯ ಮೇ ದೇಹಿ ಯತ್ವಯಾವಿಷ್ಣು ಸಂಸದಿ ॥ 77 ॥
ನಿಗ್ರಹಾತ್ ಧಾರಯಾಸ್ಮಾದ್ವೈ ತೇನ ಗೀತ ಫಲೇನ ಮಾಂ ।
ಏವಮುಕ್ತ್ವಾ ಚಂಡಾಲಂ ರಾಕ್ಷಸಃ ಶರಣಂ ಗತಃ ॥ 78 ॥

ಎಲೈ ಮಹಾನುಭಾವನೇ, ಇಂದು ನೀನು ವಿಷ್ಣು ಸನ್ನಿಧಿಯಲ್ಲಿ ಗಾನ ಮಾಡಿದ ಒಂದು ಗೀತದಫಲವನ್ನಾದರೂ ಕೊಟ್ಟು ನನ್ನನ್ನು ಈ ರಾಕ್ಷಸ ಜನ್ಮದಿಂದ ಬಿಡುಗಡೆಮಾಡು. ನಾನು ಉಜ್ಜೀವಿಸುವಂತೆ ಕೃಪೆಮಾಡು ಎಂದು ಚಂಡಾಲನಲ್ಲಿ ರಾಕ್ಷಸನು ಶರಣಾಗತಿ ಮಾಡಿದನು.

ಶ್ರುತ್ವಾ ರಾಕ್ಷಸ ವಾಕ್ಯಾನಿ ಶ್ವಪಾಕಃ ಸಂಶ್ರಿತ ವ್ರತಃ ।
ಉವಾಚ ಮಧುರಂ ವಾಕ್ಯಂ ರಾಕ್ಷಸಂ ಪಿಶಿತಾಶನಂ ॥ 79 ॥

ದೃಢವ್ರತನಾದ ನಂಪಾಡುವಾನ್ ರಾಕ್ಷಸನ ಮಾತನ್ನು ಕೇಳಿ ಹೀಗೆ ಹೇಳಿದನು.

ಕಿಂ ತ್ವಯಾ ದುಷ್ಕೃತಂ ಕರ್ಮ ಕೃತಪೂರ್ವಂತು ರಾಕ್ಷಸ ।
ಕರ್ಮಣೋ ಯಸ್ಯ ದೋಷೇಣ ರಾಕ್ಷಸೀಂ ಯೋನಿಮಾಶ್ರಿತಃ ॥80 ॥

ಎಲೈ ರಾಕ್ಷಸನೇ, ಹಿಂದೆ ಯಾವ ದುಷ್ಕೃತವಾದ ಕರ್ಮವು ನಿನ್ನಿಂದ ಮಾಡಲ್ಪಟ್ಟಿತು? ಯಾವ ಕರ್ಮದೋಷದಿಂದ ರಾಕ್ಷಸ ಯೋನಿಯಲ್ಲಿ ಹುಟ್ಟಿರುವೆ ? ಎಂದು ಕೇಳಿದನು.

ಏವ ಮುಕ್ತಃ ಶ್ವಪಾಕೇನ ಪೂರ್ವವೃತ್ತಂ ಅನುಸ್ಮರನ್ ।
ರಾಕ್ಷಸಃ ಶರಣಂ ಗತ್ವಾ ಶ್ವಪಾಕಂ ಇದಮಬ್ರವೀತ್ ॥ 81 ॥

ಪೂರ್ವ ಜನ್ಮದಲ್ಲಿ ನಾನು ಚರಕ ಕುಲದಲ್ಲಿ ಹುಟ್ಟಿದ ಸೋಮಶರ್ಮನೆಂಬ ಬ್ರಾಹ್ಮಣನಾಗಿದ್ದೆನು, ಸೂತ್ರ, ಮಂತ್ರ ಪದಭ್ರಷ್ಟನಾಗಿ ಯಾಗಮಾಡಲು ಇಚ್ಛಿಸಿದೆನು.

ತತೋಹಂ ಕಾರಯೇತ್ ಯಜ್ಞಂ ಲೋಭಮೋಹ ಪ್ರತಿಷ್ಠಿತಃ ।
ಯಜ್ಞೇ ಪ್ರವೃತ್ತಮಾನೇತು ಶೂಲ ದೋಷಸ್ತ್ವ ಜಾಯತ ॥ 83॥

ಅರ್ಥಲೋಭದಿಂದಲೂ ಮೋಹದಿಂದಲೂ ಯಜ್ಞ ಮಾಡಿದೆ. ಆ ಯಜ್ಞದಲ್ಲಿ ಮಹತ್ತರವಾದ ಶೂಲದೋಷವೇರ್ಪಟ್ಟಿತು.

ಅಥ ಪಂಚಮರಾತ್ರೇತು ಅಸ್ಮಾಪದೇ ಕೃತಾವಹಮ್ ।
ಅಕೃತ್ವಾ ವಿಮಲಂ ಕರ್ಮ ತತಃ ಪಂಚತ್ವ ಮಾಗತಃ ॥ 84 ॥

ಯಜ್ಞವು ಪ್ರಾರಂಭವಾಗಿ ಐದು ದಿನಗಳಾದನಂತರ ಯಾಗವು ಸಮಾಪ್ತಿಯಾಗದೇನೇ ನಾನು ಮರಣಹೊಂದಿದೆ.

ತಸ್ಯ ಯಜ್ಞ ದೋಷೇಣ ಮಾತಂಗ ಶೃಣು ಯನ್ಮಮ ।
ಜಾತೋಸ್ಮಿ ರಾಕ್ಷಸಸ್ತತ್ರ ಬ್ರಾಹ್ಮಣೋ ಬ್ರಹ್ಮರಾಕ್ಷಸಃ ॥ 85 ॥

ಆ ಯಾಗ ದೋಷದಿಂದ ಬ್ರಾಹ್ಮಣನಾಗಿದ್ದ ನಾನು ಬ್ರಹ್ಮರಾಕ್ಷಸನಾಗಿ ಹುಟ್ಟಿದೆ.

ಏವಂತು ಯಜ್ಞ ದೋಷೇಣ ವಪುಃ ಪ್ರಾಪ್ತಮಿದಂ ಮಮ ।
ಇತ್ಯುಕ್ತ್ವಾ ತು ತದಾ ರಕ್ಷಃ ಶ್ವಪಾಕಂ ಶರಣಂ ಗತಃ ॥ 86 ॥

ಹೀಗೆ ಯಜ್ಞ ದೋಷದಿಂದ ಇಂತಹ ರಾಕ್ಷಸ ಶರೀರವನ್ನು ಹೊಂದಿದೆ ಎಂದು ದಃಖಿಸುತ್ತಾ ಆ ರಾಕ್ಷಸನು ನಂಪಾಡುವಾನನ್ನು ಶರಣಾಗತಿ ಮಾಡಿದನು.

ಯನ್ಮಯಾ ಪಶ್ಚಿಮಂ ಗೀತಂ ಸ್ಮರಂ ಕೈಶಿಕ ಮುತ್ತಮಂ ।
ಫಲೇನ ತಸ್ಯ ಭದ್ರಂತೇ ಮೋಕ್ಷಯಿಷ್ಯಾಮಿ ಕಿಲ್ಬಿಷಾತ್ ॥ 88 ॥

ಹೀಗೆ ಶರಣಾಗತನಾದ ಬ್ರಹ್ಮರಾಕ್ಷಸನನ್ನು ನೋಡಿ ನಂಪಾಡುವಾನ್ ಹೀಗೆ ನುಡಿದ. ಈ ದಿನ ರಾತ್ರಿ ನಾನು ''ಕೈಶಿಕ'' ವೆಂಬ ಗೀತೆಯನ್ನು ಹಾಡಿದೆ. ಆ ಗೀತ ಫಲದಿಂದ ನೀನು ಈ ರಾಕ್ಷಸ ಜನ್ಮದಿಂದ ಬಿಡುಗಡೆ ಹೊಂದಿ ಮೋಕ್ಷವನ್ನು ಹೊಂದುವವನಾಗು ಎಂದು ಅಭಯ ಪ್ರದಾನ ಮಾಡಿದನು.

# ಶ್ರೀ ವರಾಹ ಉವಾಚ

ಯಸ್ತು ಗಾಯತಿ ಮದ್ಭಕ್ತ್ಯಾ ವೈ ಕೈಶಿಕಂ ಮಮ ಸಂಸದಿ ।
ಸತ್ರಾಯತಿ ದುರ್ಗಾಣಿ ಶ್ವ ಪಾಕೋ ರಾಕ್ಷಸಂ ಯಥಾ ॥ 89 ॥

ಪರಮ ಭಕ್ತಿಯಿಂದ ನನ್ನ ಸನ್ನಿಧಿಯಲ್ಲಿ ಬಂದು ಈ ಕೈಶಿಕರಾಗದಲ್ಲಿ ಯಾರು ಹಾಡುತ್ತಾನೋ, ಅವನು ಬ್ರಹ್ಮ ರಾಕ್ಷಸನನ್ನು ಉದ್ಧರಿಸಿದ ನಂಪಾಡುವಾವನಂತೆಯೇ ತನ್ನನ್ನು ಆಶ್ರಯಿಸಿದವರಪಾಪಗಳನ್ನು ಕಳೆದು ಉದ್ಧರಿಸುವನಾಗುತ್ತಾನೆ ಎಂದು ವರಾಹ ಭಗವಾನನು ಭೂದೇವಿಯನ್ನು ನೋಡಿ ನುಡಿದನು.

ಏವಂ ತತ್ರ ವರಂ ಗುಹ್ಯಂ ರಾಕ್ಷಸೋ ಬ್ರಹ್ಮ ಸಂಸ್ಥಿತಃ ।
ಜಾತಸ್ತು ವಿಮಲೇ ವಂಶೇ ಮಮ ಲೋಕಂಚ ಗಚ್ಛತಿ ॥ 90 ॥

ಹೀಗ ನಂಪಾಡುವಾನನಿಂದ ವರವನ್ನು ಪಡೆದ ಆ ರಾಕ್ಷಸನೂ ಕೂಡ, ಆ ಘೋರ ಶರೀರವನ್ನು ಬಿಟ್ಟು ಸದ್ವಂಶದಲ್ಲಿ ನನ್ನ ಭಕ್ತನಾಗಿ ಜನಿಸಿ ನನಗೆ ಮಂಗಳಾಶಾಸನವನ್ನು ಹಾಡಿ ಪರಮ ಪದವನ್ನು ಪಡೆದನು.

ಶ್ವಪಾಕಶ್ಚಾಪಿ ಸಂಶೋ್ರಣೀ ಮಮ ಚೈವೋಪಗಾಯಕಃ ।
ಕೃತ್ವಾತು ವಿಮಲಂ ಕರ್ಮ ಸಬ್ರಹ್ಮತ್ವ ಮುಪಾಗತಃ ॥ 91 ॥

ಅನಂತರ ನಂಪಾಡುವಾನನೂ ಕೂಡ ನನ್ನ ವೈಭವವನ್ನೇ ಅನೇಕ ಕಾಲ ಗಾನ ಮಾಡುತ್ತಿದ್ದು ಪರಮ ಪದ ಸಾಮ್ರಾಜ್ಯವನ್ನು ಪಡೆದನು.

ಏತದ್ ಗೀತ ಫಲಂ ದೇವಿ ಕೌಮುದ ದ್ವಾದಶೀಂ ಪುನಃ ।
ಯಸ್ತು ಗಾಯತಿ ಸ ಶ್ರೀಮಾನ್ ಮಮ ಲೋಕಂಚ ಗಚ್ಛತಿ ॥ 92 ॥

''ನನ್ನ ಗುಣ ಚೇಷ್ಟಿತಗಳನ್ನು ಗಾನ ಮಾಡುವವನು ಪಡೆಯುವ ಮಹಾ ಪುರುಷಾರ್ಥವನ್ನು ಹೇಳುತ್ತೇನೆ ಕೇಳು. ಯಾರು ' ಕಾರ್ತಿಕ ಮಾಸ ಶುಕ್ಲಪಕ್ಷ ದ್ವಾದಶಿ' ಯ ದಿನದಂದು ನನ್ನ ಸನ್ನಿಧಿಗೆ ಬಂದು , ಈ ಕೈಶಿಕ ಮಾಹಾತ್ಯವನ್ನು ಪಠಿಸುತ್ತಾರೋ, ಯಾರೂ ಕೇಳುತ್ತಾರೋ ಅವರು ''ಶೂಳ್‌ನ್ದಿರಂದು ಏತ್ತುವರ್ ಪಲ್ಲಾಂಡೇ'', ಎಂದೂ 'ಏತತ್ರ ಸಾಮಗಾಯನ್ನಾಸ್ತೇ ' ಎಂದೂ ಹೇಳುವಂತೆ ನನಗೆ ಮಂಗಳಾಶಾಸನ ಮಾಡುತ್ತಾ ಬ್ರಹಾನುಭವವನ್ನು ಹೊಂದುತ್ತಾರೆ.'' ಎಂದು ಭೂದೇವಿಯನ್ನು ನೋಡಿ ವರಾಹ ಪರಮಾತ್ಮನು ತಿಳಿಸಿದನು.

ಹೀಗೆ ವರಾಹ ಪರಮಾತ್ಮನು ಅನುಗ್ರಹಿಸಿದ ಮಾತನ್ನು ಕೇಳಿ ಭೂದೇವಿಯೂ ಪ್ರಳಯಾರ್ಣವದಲ್ಲಿ ಮಗ್ನಳಾಗಿದ್ದ ಆಯಾಸವೆನ್ನೆಲ್ಲವನ್ನೂ ಕಳೆದು ಕೊಂಡು ಈ ಗಾನ ರೂಪವಾದ ಉಪಾಯದ ವೈಭವವೆಂತಹುದು ? ಎಂದು ಸಂತೋಷ ಅಶ್ಚರ್ಯ ಹೊಂದುತ್ತಾ ಕೃತಾರ್ಥಳಾದಳು.

## ॥ ಕೈಶಿಕ ಪುರಾಣ ವ್ಯಾಖ್ಯಾನಂ ಸಂಪೂರ್ಣ ॥

### ॥ ಶ್ರೀಭಟ್ಟರ್ ತಿರುವಡಿಗಳೇ ಶರಣಂ ॥

ಆಳ್ವಾರ್, ಎಂಬೆರುಮಾನಾರ್, ದೇಶಿಕರ್, ಜೀಯರ್ ತಿರುವಡಿಗಳೇ ಶರಣಂ

★★★★

# ನಮ್ಮ ಪ್ರಕಟಣೆಗಳು

೧. ತತ್ವತ್ರಯಂ (ವ್ಯಾಖ್ಯಾನದ ಕನ್ನಡ ಅನುವಾದ) ಶ್ರೀಮತಿ ರಮಾಶ್ರೀನಿವಾಸನ್
೨. ಪ್ರಪನ್ನಪರಿತ್ರಾಣಂ (ಅನುವಾದ ಮತ್ತು ವ್ಯಾಖ್ಯಾನ) ,,
೩. ನವವಿಧ ಸಂಬಂಧಂ ,,
೪. ತಿಳಿಯಲೇಬೇಕಾದುದು ,,
೫. ಕೈಶಿಕ ಪುರಾಣಮ್ (ಅನುವಾದ) ,,
೬. ಥೇಂಕಿಣೇಪುರ ಮಹಾತ್ಮ್ಯಂ ,,
೭. ಮುಮುಕ್ಷುಪ್ಪಡಿ (ವ್ಯಾಖ್ಯಾನದ ಕನ್ನಡ ಅನುವಾದ) ,,
೮. ಅರ್ಥಪಂಚಕಮ್ (ಅನುವಾದ ಮತ್ತು ವ್ಯಾಖ್ಯಾನ) ,,
೯. ಅನುಷ್ಠಾನ ದರ್ಶಿನೀ (ಮಂತ್ರಾರ್ಥ ವಿವರಣೆ) ಶ್ರೀ ಉ॥ವೇ॥ ಘಂಟಿ ತಿರುವೇಂಕಟಾಚಾರ್ಯ
೧೦. ಭಗವದ್ಗುಣ ವೈಭವಮ್ ಶ್ರೀಮತಿ ಲಲಿತಮ್ಮ ರಾಜಯ್ಯಂಗಾರ್
೧೧. ದಿವ್ಯಪ್ರಬಂಧ ಕಿರಣ ,,
೧೨. ವಿಮಾನಂ ,,
೧೩. ಅಸ್ತುತೇ- ಸರ್ವಂ ಸಂಪತ್ಸ್ಯತೇ ,,
೧೪. ಉಭಯವೇದ ಸುಧಾ ಸಮೀಕ್ಷೆ ,,
೧೫. ಶ್ರೀರಂಗಮಹತ್ವಮ್ (ಅನುವಾದ) ,,
೧೬. ಶ್ರೀ ಕೈಶಿಕ ಪುರಾಣಂ (ವ್ಯಾಖ್ಯಾನದ ಕನ್ನಡ ಅನುವಾದ) ಶ್ರೀಮತಿ ರಮಾಶ್ರೀನಿವಾಸನ್
೧೭. ಶ್ರೀ ವಿಷ್ಣುಸಹಸ್ರನಾಮ ಮತ್ತು ಇತರ ಸ್ತೋತ್ರಗಳು

# ಬರಲಿರುವ ಗ್ರಂಥಗಳು

೧. ಶ್ರೀವಚನ ಭೂಷಣಂ (ವ್ಯಾಖ್ಯಾನದ ಕನ್ನಡ ಅನುವಾದ) ಶ್ರೀಮತಿ ರಮಾಶ್ರೀನಿವಾಸನ್
೨. ಅರ್ಚಿರಾದಿ (ಅನುವಾದ ಮತ್ತು ವ್ಯಾಖ್ಯಾನ) ,,
೩. ತನಿಶ್ಲೋಕೀ (ವ್ಯಾಖ್ಯಾನದ ಕನ್ನಡ ಅನುವಾದ) ,,